ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

03 ಮಾರ್ಚ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 347 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629




ಯುರೇನಿಯಂ ಮತ್ತು ನಿರ್ಣಾಯಕ ಖನಿಜಗಳ ಪೂರೈಕೆಗೆ ಸಂಬಂಧಿಸಿದಂತೆ ಭಾರತ ಮತ್ತು ಕೆನಡಾ ಮಹತ್ವದ ಒಪ್ಪಂದಗಳಿಗೆ ಸೋಮವಾರ ಸಹಿ ಮಾಡಿವೆ.






ಇಂದು ವಿಶ್ವ ವನ್ಯ ಜೀವಿಗಳ ದಿನ » 2



ಗ್ರಾಮಸ್ಥರು ಕೈ ಜೋಡಿಸಿದರೆ ಶಾಲೆಗಳ ಸಮಗ್ರ ಅಭಿವೃದ್ಧಿ » 3



ಭೂ ಮಾಫಿಯಾ ತಡೆಗೆ ಎಸ್‌ಐಟಿಯಿಂದ ತನಿಖೆಯಾಗಲಿ » 4


# ಖಮೇನಿ ಹತ್ಯೆಗೆ ಪ್ರತೀಕಾರ: ಕ್ಷಿಪಣಿ, ಡ್ರೋನ್ ದಾಳಿ

## ಸೌದಿ ಅರೇಬಿಯಾ, ಯುಎಇ, ಕುವೈತ್, ಬಹರೇನ್ ಮೇಲೆ ಇರಾನ್ ಬಲ ಪ್ರದರ್ಶನ

• ಪ್ರಜೋದಯ ವರದಿ

**ನವದೆಹಲಿ:** ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಪ್ರತೀಕಾರವಾಗಿ ಮಧ್ಯಪ್ರಾಚ್ಯ ದೇಶಗಳ ಮೇಲೆ ಇರಾನ್ ಕ್ಷಿಪಣಿ, ಡ್ರೋನ್ ದಾಳಿಗಳನ್ನು ನಡೆಸುತ್ತಿದೆ. ಸೌದಿ ಅರೇಬಿಯಾ, ಯುಎಇ, ಕುವೈತ್, ಬಹರೇನ್ ಮೇಲೆ ಮನಸೋ ಇಚ್ಛೆ ಕ್ಷಿಪಣಿ ದಾಳಿ ನಡೆಸುವ ಮೂಲಕ ಬಲ ಪ್ರದರ್ಶನಕ್ಕೆ ಮುಂದಾಗಿದೆ.

ಸೋಮವಾರ ಇರಾನಿನ ಕ್ರಾಂತಿಕಾರಿ ಗಾರ್ಡ್‌ಗಳು ಎಂದು ಕರೆಯಲ್ಪಡುವ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಟೆಲ್ ಅವೀವ್‌ನಲ್ಲಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ಹೇಳಿಕೊಂಡಿದೆ. ಆದರೆ, ಈ ದಾಳಿ ನಡೆದಾಗ 76 ವರ್ಷದ ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿಯಲ್ಲಿದ್ದರೇ ಎಂಬುದು ಸ್ಪಷ್ಟವಾಗಿಲ್ಲ.



### ಭಾರತದ ವ್ಯಕ್ತಿ ಸಾವು

ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಭಾರತದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಸೋಮವಾರ ಓಮನ್ ಕೊಲ್ಲಿಯಲ್ಲಿ ತೈಲ ಟ್ಯಾಂಕರ್‌ಗೆ ಬಾಂಬ್ ಹೊತ್ತೊಯ್ಯುತ್ತಿದ್ದ ಡ್ರೋನ್ ಬೋಟ್ ಡಿಕ್ಕಿ ಹೊಡೆದು ಅದರಲ್ಲಿದ್ದ ನಾವಿಕ ಸಾವನ್ನಪ್ಪಿದ್ದಾರೆ. ಈ ತೈಲ ಹಡಗಿನಲ್ಲಿದ್ದ 21 ಸಿಬ್ಬಂದಿಯನ್ನು ರಕ್ಷಿಸಲಾಗಿದೆ.

ಖೇಬರ್ ಶೇಕನ್ ಬ್ಯಾಲಿಸ್ಟಿಕ್ ಕ್ಷಿಪಣಿಗಳಿಂದ ಗುರಿ ಇಟ್ಟು ನಡೆಸಲಾದ ದಾಳಿಯಲ್ಲಿ ಇಸ್ರೇಲಿ ಪ್ರಧಾನಿ ನೆತನ್ಯಾಹು ಅವರ ಕಚೇರಿ ಮತ್ತು ಆಡಳಿತದ ವಾಯುಪಡೆಯ ಕಮಾಂಡರ್ ಸ್ಥಳವು ನಾಶವಾಯಿತು ಎಂದು ಐಆರ್‌ಜಿಸಿ ಹೇಳಿಕೆಯಲ್ಲಿ ತಿಳಿಸಿದೆ. ಆದರೆ, ಇಸ್ರೇಲ್ ಈ ಹೇಳಿಕೆಯನ್ನು ನಿರಾಕರಿಸಿದೆ.

ಪ್ರತೀಕಾರದ ದಾಳಿಗೆ ಮುಂದಾಗಿರುವ ಇರಾನ್, ಈ ಮಧ್ಯೆ ಸೈಪ್ರಸ್

» ನಾಲ್ಕನೇ ಪುಟದಲ್ಲಿ

### ಇರಾನ್ ದಾಳಿ ಖಂಡಿಸಿದ ಮೋದಿ



**ನವದೆಹಲಿ:** ಮಧ್ಯ ಪ್ರಾಚ್ಯ ದೇಶಗಳಲ್ಲಿ ಉಂಟಾಗಿರುವ ಉದ್ವಿಗ್ನತೆಯ ನಡುವೆ ಪ್ರಧಾನಿ ನರೇಂದ್ರ ಮೋದಿ ಬಹ್ರೇನ್ ರಾಜ ಮತ್ತು ಸೌದಿ ಅರೇಬಿಯಾದ ಕ್ರೌನ್ ಪ್ರಿನ್ಸ್ ಜೊತೆ ದೂರವಾಣಿ ಮೂಲಕ ಮಾತನಾಡಿದ್ದಾರೆ. ಈ ಎರಡೂ ದೇಶಗಳ ಮೇಲೆ ಇರಾನ್ ನಡೆಸಿದ ದಾಳಿಯನ್ನು ಮೋದಿ ಖಂಡಿಸಿದ್ದಾರೆ.

ಶಾಂತಿಯ ಪುನಃಸ್ಥಾಪನೆಗಾಗಿ ರಾಜತಾಂತ್ರಿಕ ಪ್ರಯತ್ನಗಳಿಗೆ ಭಾರತದ ಬೆಂಬಲವನ್ನು ಪುನರುಚ್ಚರಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮೋದಿ, ಬಹ್ರೇನ್ ರಾಜ ಹಮದ್ ಬಿನ್ ಇಸಾ ಅಲ್ ಖಲೀಫಾ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದೆ. ಭಾರತವು ಬಹ್ರೇನ್ ಮೇಲಿನ ದಾಳಿಯನ್ನು ಖಂಡಿಸುತ್ತದೆ ಮತ್ತು ಈ ಕಷ್ಟದ ಸಮಯದಲ್ಲಿ ಅಲ್ಲಿನ ಜನರೊಂದಿಗೆ ಒಗ್ಗಟ್ಟಿನಲ್ಲಿ ನಿಲ್ಲುತ್ತದೆ ಎಂದು ತಿಳಿಸಿದೆ. ಬಹ್ರೇನ್‌ನಲ್ಲಿರುವ ಭಾರತೀಯ ಸಮುದಾಯಕ್ಕೆ ನೀಡಿದ ಬೆಂಬಲಕ್ಕಾಗಿ ನಾನು ಅವರಿಗೆ ಧನ್ಯವಾದ ಹೇಳಿದೆ ಎಂದು ಹೇಳಿದ್ದಾರೆ.

ಸೌದಿ ಅರೇಬಿಯಾದ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಕೂಡ ಮೋದಿ ಚರ್ಚಿಸಿದ್ದು, ಸೌದಿ ಅರೇಬಿಯಾದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಉಲ್ಲಂಘಿಸುವ ಇತ್ತೀಚಿನ ದಾಳಿಗಳನ್ನು ಭಾರತ ಖಂಡಿಸುತ್ತದೆ. ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯ ಆರಂಭಿಕ ಪುನಃಸ್ಥಾಪನೆ ಅತ್ಯಂತ ಮಹತ್ವದ್ದಾಗಿದೆ ಎಂದು ನಾವು ಒಪ್ಪಿಕೊಂಡಿದ್ದೇವೆ. ಈ ಕಷ್ಟದ ಸಮಯದಲ್ಲಿ ಭಾರತೀಯ ಸಮುದಾಯದ ಸುರಕ್ಷತೆಯನ್ನು ನೋಡಿಕೊಂಡಿದ್ದಾರೆಂದು ಮತ್ತೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

# ಮಾ.7 ರಂದು ನಗರದಲ್ಲಿ ಯುವ ಉದ್ಯೋಗ ಮೇಳ

## 10 ಸಾವಿರ ಹುದ್ದೆ ಭರ್ತಿಗೆ ಕ್ರಮ : ಜಿಲ್ಲಾಧಿಕಾರಿ

• ಪ್ರಜೋದಯ ವರದಿ

**ಹಾಸನ:** ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಮಾ.7ರ ಶನಿವಾರ ಯುವ ಉದ್ಯೋಗ ಮೇಳ ಹಮ್ಮಿಕೊಂಡಿದ್ದು, ಜಿಲ್ಲೆಯ ಯುವಕ-ಯುವತಿಯರು ಪ್ರಯೋಜನ ಪಡೆಯಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಕರ್ನಾಟಕ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ ವತಿಯಿಂದ ಮೇಳ ಆಯೋಜಿಸಲಾಗಿದ್ದು, ಜಿಲ್ಲೆ, ಹೊರ ರಾಜ್ಯಗಳಿಂದ 100 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಸಂದರ್ಶನ ನಡೆಸಲಿದ್ದು, 10 ಸಾವಿರ ಜನರಿಗೆ ಉದ್ಯೋಗ ಕಲ್ಪಿಸುವ ಗುರಿ ಹಾಕಿಕೊಳ್ಳಲಾಗಿದೆ. 850 ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಅಕ್ಕಪಕ್ಕದ ಹೊರ ಜಿಲ್ಲೆಯವರು ಭಾಗವಹಿಸಬಹುದೆಂದರು.

ಕನಿಷ್ಟ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮುಗಿಸಿರುವವರು ತಮ್ಮ ಅಂಕ ಪಟ್ಟಿ, ಆಧಾರ್ ಕಾರ್ಡ್ ಹಾಗು ಎರಡು ಭಾವಚಿತ್ರಗಳೊಂದಿಗೆ ಬೆಳಿಗ್ಗೆ 9.30



ರಿಂದ ಸಂಜೆ 5ರ ವರೆಗೆ ನಡೆಯುವ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು. ಉದ್ಯೋಗಕ್ಕಾಗಿ ಹಂಬಲಿಸುತ್ತಿರುವ ಯುವ ಸಮೂಹ ಪ್ರಯೋಜನ ಪಡೆಯಬೇಕು. ಖಾಸಗಿ ಸಂಸ್ಥೆಗಳಲ್ಲಿ ಕೌಶಲಕ್ಕೆ ಆದ್ಯತೆ ನೀಡುತ್ತವೆ. ಸಂದರ್ಶನಕ್ಕೆ ಬರುತ್ತಿರುವ ಕೆಲವು ಕಂಪನಿಯರು ತಾವೇ ತರಬೇತಿ ನೀಡುವುದಾಗಿ ಭರವಸೆ ನೀಡಿದ್ದಾರೆ. ಸಂದರ್ಶನಕ್ಕೆ ಬರುವವರಿಗೆ ಮೂಲಸೌಕರ್ಯ ಕಲ್ಪಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ. ಉಪಹಾರ, ಕುಡಿಯುವ ನೀರು, ಶೌಚಾಲಯ ಹಾಗು ನೆರಳಿನ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಕಂಪನಿಗೂ ಪ್ರತ್ಯೇಕ ಕೊಠಡಿ ನೀಡಿದ್ದು, ಕಾಲೇಜು ಆವರಣದಲ್ಲಿ ಶಾಮಿಯಾನ ಹಾಕಲಾಗುತ್ತದೆ. ಆಸಕ್ತರು ಮೊ.ಸಂ. 9742871492 ಇಲ್ಲಿಗೆ ಕರೆ ಮಾಡಿ ಅಥವಾ www.hassanudyogamela.com ಇಲ್ಲಿಗೆ ಇ-ಮೇಲ್ ಮಾಡುವ ಮೂಲಕ ತಮ್ಮ ವಿವರ ಸಲ್ಲಿಸಬೇಕು. ಎಲ್ಲಾ ಸಂದರ್ಶನಾರ್ಥಿಗಳಿಗೆ ಟೋಕನ್ ಸಂಖ್ಯೆ ನೀಡಲಾಗುವುದೆಂದು ಹೇಳಿದರು.

**ಕಾನೂನು ಪಾಲನೆ ನಮ್ಮ ಆದ್ಯತೆ**

ಹೊಳೆನರಸೀಪುರದ ಲಕ್ಷ್ಮೀ ನರಸಿಂಹಸ್ವಾಮಿ ಜಾತ್ರಾ ಮಹೋತ್ಸವ ಮಾ.3ರ ಮಂಗಳವಾರ ನಡೆಯಲಿದ್ದು, ಕಾನೂನು ಪಾಲನೆ ನಮ್ಮ ಆದ್ಯತೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಲತಾಕುಮಾರಿ ಅವರು, ರಥಕ್ಕೆ ಬಟ್ಟೆ ಹಾಕುವ ವಿಚಾರವಾಗಿ ಗೊಂದಲ ಉಂಟಾಗಿದೆ. ಅಲಂಕಾರ ವಿಷಯ ಇಷ್ಟು ಗಂಭೀರ ಸ್ವರೂಪ ಪಡೆಯುತ್ತದೆಂದು ನಾವು ಭಾವಿಸಿರಲಿಲ್ಲ. ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು, ಕಾನೂನು ಪ್ರಕಾರವೇ ಎಲ್ಲಾ ಪ್ರಕ್ರಿಯೆ ನಡೆಯಲಿದೆ. ಈ ಹಿಂದೆಯೇ ತಹಶೀಲ್ದಾರ್ ಹಾಗು ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಸಭೆ ನಡೆದಿದೆ. ಆದರೂ ಸಮಸ್ಯೆ

» ನಾಲ್ಕನೇ ಪುಟದಲ್ಲಿ

# ರಾಗಿ ಕೇಂದ್ರದ ತೂಕದ ಯಂತ್ರ ಪರಿಶೀಲಿಸಿದ ಡಿ.ಸಿ.

## ಪಾರದರ್ಶಕತೆಗೆ ಆದ್ಯತೆ ನೀಡಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾದ್ಯಂತ ಬೆಂಬಲ ಬೆಲೆಯಡಿ ರಾಗಿ ಖರೀದಿ ಪ್ರಕ್ರಿಯೆ ಆರಂಭವಾಗಿದ್ದು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸೋಮವಾರ ಬೆಳಿಗ್ಗೆ ಎಪಿಎಂಸಿಗೆ ಭೇಟಿ ನೀಡಿ ಪರಿಶೀಲಿಸಿದರು.

ಅರಸೀಕೆರೆ, ಅರಕಲಗೂಡಿನ ಖರೀದಿ ಕೇಂದ್ರಗಳಲ್ಲಿ ತೂಕದಲ್ಲಿ ಮೋಸ, ಹಮಾಲಿಗಳಿಂದ ಹೆಚ್ಚಿನ ಹಣ ವಸೂಲಿ ಹೀಗೆ ನಾನಾ ಆರೋಪಗಳು ಕೇಳಿ ಬಂದ ಹಿನ್ನಲೆಯಲ್ಲಿ ದಿಢೀರ್ ಭೇಟಿ ನೀಡಿ, ರಾಗಿ ಸ್ವಚ್ಛಗೊಳಿಸುವ ಜರಡಿಗೆ ತಾವೇ ರಾಗಿ ಹಾಕುವ ಮೂಲಕ ಕಾರ್ಯವಿಧಾನವನ್ನು ಸೂಕ್ಷ್ಮವಾಗಿ ವೀಕ್ಷಿಸಿದರು. ನಂತರ ತೂಕದ ಪ್ರಕ್ರಿಯೆಯನ್ನು ಅರಿಯುವ ಜೊತೆಗೆ ವಾಹನಗಳಿಂದ ರಾಗಿ ಚೀಲ ಹೊತ್ತು ತರುತ್ತಿದ್ದ ಹಮಾಲಿಗಳ ಉಭಯ ಕುಶಲೋಪರಿ ಹಾಗು ರಾಗಿ ಮಾರಾಟಕ್ಕೆ ಬಂದಿದ್ದ ರೈತರ ಅಹವಾಲು ಆಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು, ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಲ್ಲಿ ಒಟ್ಟು 26 ರಾಗಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಸಕಲೇಶಪುರ ಮತ್ತು ಆಲೂರಿನಲ್ಲಿ ರೈತರು ನೋಂದಾಯಿಸದ ಹಿನ್ನಲೆಯಲ್ಲಿ 24 ಕೇಂದ್ರಗಳಲ್ಲಿ ಪ್ರಕ್ರಿಯೆ ನಡೆಯುತ್ತಿದೆ ಎಂದರು.

**46 ಸಾವಿರ ರೈತರಿಂದ ನೋಂದಣಿ**

ಪ್ರತಿ ರೈತರಿಂದ ಎಕರೆಗೆ 10 ಕ್ವಿಂಟಾಲ್‌ನಂತೆ ಗರಿಷ್ಟ 50 ಕ್ವಿಂಟಾಲ್ ವರೆಗೆ 4,286 ರೂ.ನಂತೆ ಖರೀದಿಸಲಾಗುತ್ತಿದೆ. ಮಾರ್ಚ್ ಅಂತ್ಯದವರೆಗೆ ನೋಂದಣಿ ಹಾಗು ಖರೀದಿಗೆ ಅವಕಾಶ ನೀಡಲಾಗಿದೆ. ಜಿಲ್ಲೆಯಲ್ಲಿ ಈ ವರೆಗೆ 46,258 ರೈತರು ನೋಂದಾಯಿಸಿಕೊಂಡಿದ್ದು, 10,85,494.50 ಕ್ವಿಂಟಾಲ್ ರಾಗಿ ಖರೀದಿಗೆ ನೋಂದಣಿ ಮಾಡಲಾಗಿದೆ. ಈವರೆಗೆ 240 ರೈತರಿಂದ 64,728 ಕ್ವಿಂಟಾಲ್ ಖರೀದಿ ಮಾಡಲಾಗಿದೆ.



ಗುಣಮಟ್ಟದ ರಾಗಿ ಖರೀದಿಗೆ ಎಲ್ಲಾ ಕೇಂದ್ರಗಳಲ್ಲಿ ಸ್ವಚ್ಛತಾ ಕ್ರಮ ಕೈಗೊಳ್ಳಲಾಗಿದೆ. ರೈತರ ಜೇಷ್ಠತೆ ಆಧಾರದ ಮೇಲೆ ಎರಡು ದಿನ ಮುಂಚಿತವಾಗಿ ದೂರವಾಣಿ ಮೂಲಕ ಮಾಹಿತಿ ನೀಡಿ ಪದಾರ್ಥ ತರಲು ಅವಕಾಶ ಕಲ್ಪಿಸಲಾಗುತ್ತಿದೆ. ತೂಕದಲ್ಲಿ ಮೋಸವಾಗದಂತೆ ಎಚ್ಚರಿಕೆ ವಹಿಸಲಾಗಿದೆ.

ಸಮಸ್ಯೆಗಳು ಕೇಳಿ ಬಂದ ಹಿನ್ನಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚಿಸಲಾಗಿದೆ. ಈ ಸಮಿತಿಯಲ್ಲಿ ಉಪ ತಹಶೀಲ್ದಾರ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು, ಆಹಾರ ಇಲಾಖೆ ಅಧಿಕಾರಿಗಳು ಹಾಗು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿಗಳು ಕಾರ್ಯನಿರ್ವಹಿಸಲಿದ್ದಾರೆಂದರು.

ರೈತರಿಂದ ಖರೀದಿಸಿದ ರಾಗಿಯನ್ನು ಜರಡಿ ಮೂಲಕ ಸ್ವಚ್ಛಗೊಳಿಸಿ, ಸರ್ಕಾರ ನೀಡಿರುವ 50 ಕೆ.ಜಿ. ಗೋಣಿ ಚೀಲಗಳಲ್ಲಿ ತುಂಬಿಸಿ ರಾಜ್ಯ ಉಗ್ರಾಣ ನಿಗಮಗಳಿಗೆ ರವಾನೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಖರೀದಿಸಿದ ರಾಗಿಯನ್ನು ಒಟ್ಟು ಏಳು ಉಗ್ರಾಣ ಕೇಂದ್ರಗಳಲ್ಲಿ ಸಂಗ್ರಹಿಸಲಾಗುತ್ತಿದ್ದು, ಲಾರಿಗಳ ಓಡಾಟವನ್ನು ಜಿಪಿಎಸ್ ಮೂಲಕ ಪರಿಶೀಲಿಸಲಾಗುತ್ತಿದೆ. ರಾಗಿಯ ತೇವಾಂಶವನ್ನು ಸ್ನೇಹ ಲ್ಯಾಬೋರೇಟರೀಸ್ ಮೂಲಕ ಪರೀಕ್ಷಿಸಿ ಗುಣಮಟ್ಟ ಖಚಿತಪಡಿಸಿಕೊಂಡ ನಂತರ ಖರೀದಿ ಮಾಡಲಾಗುತ್ತಿದೆ. ರೈತರಿಗೆ 15 ದಿನಗಳೊಳಗೆ ಡಿಬಿಟಿ ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗುವುದೆಂದು ಹೇಳಿದರು.

ಅರಕಲಗೂಡು ಎಪಿಎಂಸಿ ಕೇಂದ್ರದಲ್ಲಿ ರಾಗಿ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ರೈತರಿಗೆ ನಷ್ಟವಾಗುತ್ತಿದೆ ಎಂಬ ದೂರು ಬಂದಿದೆ. ಪರಿಶೀಲಿಸಿ ಸಮಸ್ಯೆ ಬಗೆಹರಿಸುವಂತೆ ತಹಶೀಲ್ದಾರ್‌ಗೆ ಸೂಚಿಸಲಾಗಿದೆ ಎಂದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಅರುಣ್ ಕುಮಾರ್ ಸಂಗಾವಿ, ಆಹಾರ ನಿಗದಮ ವ್ಯವಸ್ಥಾಪಕಿ ಅನುರಾಧಾ, ಎಪಿಎಂಸಿ ಕಾರ್ಯದರ್ಶಿ ಮಧು ಇತರರಿದ್ದರು.

# ರಾಜಕೀಯ ಸ್ವರೂಪ ಪಡೆದ ರಥದ ಅಲಂಕಾರ ಬಟ್ಟೆ ವಿಚಾರ

## ಇಂದು ಹೊಳೆನರಸೀಪುರ ಲಕ್ಷ್ಮೀ ನರಸಿಂಹಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

**ಹೊಳೆನರಸೀಪುರ :** ಪಟ್ಟಣದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಹಿನ್ನಲೆ ರಥಕ್ಕೆ ಅಲಂಕರಿಸುವ ಬಟ್ಟೆ ವಿಚಾರವು ರಾಜಕೀಯ ಸ್ವರೂಪ ಪಡೆದಿದೆ. ಈ ನಿಟ್ಟಿನಲ್ಲಿ ಸಂಧಾನ ಉದ್ದೇಶದಿಂದ ಉಪ ವಿಭಾಗಾಧಿಕಾರಿ ನಡೆಸಿದ ಶಾಂತಿ ಸಭೆಯು ವಿಫಲಗೊಂಡಿದೆ.

ಮಾ.3ರ ಮಂಗಳವಾರ ರಥೋತ್ಸವ ನಡೆಯಬೇಕಿದೆಯಾದರೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗು ಸಂಸದ ಶ್ರೇಯಸ್ ಪಟೇಲ್ ಅವರು ವಿಚಾರವನ್ನು ಪ್ರತಿಷ್ಠೆಯಾಗಿಸಿಕೊಂಡಿದ್ದಾರೆ ಎನ್ನಲಾಗಿದೆ. ಜಿಲ್ಲಾಡಳಿತದ ನಿರ್ದೇಶನದಂತೆ ರಥಕ್ಕೆ ತೊಡಿಸಿದ್ದ ವಸ್ತ್ರವನ್ನು ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ತೆಗೆಸಿದರು. ಅದಕ್ಕೆ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹಾಗು ಬೆಂಬಲಿಗರು ಅಧಿಕಾರಿಗಳ ಮೇಲೆ ಮುಗಿಬಿದ್ದರು. ಪಟ್ಟಣದಲ್ಲಿ ಪರಿಸ್ಥಿತಿ ಬಿಗಡಾಯಿಸುವ ಸೂಚನೆ ಅರಿತ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು, ಉಪವಿಭಾಗಾಧಿಕಾರಿ ಹಾಗು ಹೆಚ್ಚುವರಿ ಪೊಲೀಸರನ್ನು ಕಳುಹಿಸಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸಿದರು.



**ನನ್ನನ್ನು ಗುಲಾಮಎಂದುಕೊಂಡಿದ್ದೀರಾ?**

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ರೇಣುಕುಮಾರ್ ವಿರುದ್ಧ ಕಿಡಿಕಾರಿದರು. ಜಿಲ್ಲಾಧಿಕಾರಿ ನಡೆಸಿದ ಸಭೆಗೆ ಶಾಸಕರನ್ನು ಆಹ್ವಾನಿಸಬೇಕಿತ್ತು. ನನ್ನ ಉಪಸ್ಥಿತಿ ಇಲ್ಲದೆ ಹೇಗೆ ನಿರ್ಣಯ ಕೈಗೊಳ್ಳಲು ಸಾಧ್ಯ. ಶಾಸಕರನ್ನು ನಿಮ್ಮ ಗುಲಾಮರೆಂದು ತಿಳಿದಿದ್ದೀರಾ. ನಾನು ಸಾಕಷ್ಟು ಜಿಲ್ಲಾಧಿಕಾರಿಗಳನ್ನು ನೋಡಿದ್ದೇನೆ. ಇಂತಹವರ ಆಟಗಳೆಲ್ಲಾ ನನ್ನ ಮುಂದೆ ನಡೆಯುವುದಿಲ್ಲ. ನೀವು ನಡೆಸುವ ಶಾಂತಿ ಸಭೆಗೆ ನಾವು ಯಾವ ಕಾರಣಕ್ಕೂ ಬರುವುದಿಲ್ಲ. ಬೇಕಿದ್ದರೆ ನನ್ನನ್ನು ಬಂಧಿಸಿ ಎಂದು ಉಪವಿಭಾಗಾಧಿಕಾರಿಗೆ ಖಡಕ್ ಉತ್ತರ ಕೊಟ್ಟರು.

ಜಿಲ್ಲಾಡಳಿತದ ನಿರ್ದೇಶನದಂತೆ ರಥಕ್ಕೆ ತೊಡಿಸಿದ್ದ ವಸ್ತ್ರ ತೆಗೆಯಲಾಗಿದೆ ಎಂದು ಹೇಳುತ್ತೀರಿ, ನೀವು ಶಾಸಕರಿಗೆ ಏನು ಗೌರವ ಕೊಟ್ಟಂತಾಯಿತು. ತಾಲ್ಲೂಕು ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ರಥಕ್ಕೆ ಬಟ್ಟೆ ತೊಡಿಸಿದ್ದೀರಿ, ಆದರೆ ಮತ್ತೆ ಬಟ್ಟೆ ಬಿಚ್ಚಿದ್ದೀರಿ, ಇದು ಎಷ್ಟು ಸರಿ. ಯಾವುದೇ ಅಹಿತಕರ ಘಟನೆ ನಡೆದರೆ ನೀವೇ ಹೊಣೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

» ನಾಲ್ಕನೇ ಪುಟದಲ್ಲಿ

### ರಥ ಅಲಂಕಾರಕ್ಕೆ ಜೆಡಿಎಸ್ ಅಡ್ಡಿ : ಪ್ರತಿಭಟನೆ

ಸೋಮವಾರ ಸಂಜೆ ತಾಲ್ಲೂಕು ಆಡಳಿತದಿಂದ ರಥಕ್ಕೆ ಹೂವಿನ ಅಲಂಕಾರಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಂತೆ ಜೆಡಿಎಸ್ ಬೆಂಬಲಿಗರು ಅಡ್ಡಿ ಪಡಿಸಿದರು. ಜಿಲ್ಲಾಧಿಕಾರಿ, ತಹಶೀಲ್ದಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ಅಲಂಕಾರ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಪಟ್ಟು ಹಿಡಿದರು. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ವಿರೋಧದ ನಡುವೆಯೂ ಅಧಿಕಾರಿಗಳು ಮೂರು ಸುತ್ತು ಅಲಂಕಾರ ಮಾಡಿದರು. ನಂತರ ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತದೆ ಎಂದು ನಿಲ್ಲಿಸಲಾಯಿತು. ಬಳಿಕ ಸೂಕ್ತ ಪೊಲೀಸ್ ಭದ್ರತೆ ನೀಡಿದರೆ ಅಲಂಕಾರ ಕೆಲಸ ಮುಂದುವರೆಸುವುದಾಗಿ ಅಧಿಕಾರಿಗಳು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ 144 ನಿಷೇಧಾಜ್ಞೆ ಜಾರಿಗೊಳಿಸಿದ ನಂತರ ರಥೋತ್ಸವದ ಸಿದ್ಧತೆ ಮುಂದುವರಿಸಲಿದ್ದಾರೆಂದು ತಿಳಿದು ಬಂದಿದೆ. ಇಷ್ಟೆಲ್ಲಾ ಬೆಳವಣಿಗೆಗಳ ನಡುವೆಯೂ ಕಾಂಗ್ರೆಸ್ ಕಾರ್ಯಕರ್ತರು ಮೂಕ ಪ್ರೇಕ್ಷಕರಾಗಿದ್ದರು.

# ಕೆಎಸ್‌ಆರ್‌ಟಿಸಿ ನೌಕರನ ಹತ್ಯೆ: ಆರೋಪಿಗಳ ಬಂಧನಕ್ಕೆ ಆಗ್ರಹ





• ಪ್ರಜೋದಯ ವರದಿ

**ಹಾಸನ:** ಕೆಎಸ್‌ಆರ್‌ಟಿಸಿ ನೌಕರ ಆರ್.ಡಿ.ವೀರಪ್ಪ ಅವರ ಹತ್ಯೆ ಪ್ರಕರಣವನ್ನು ತ್ವರಿತವಾಗಿ ತನಿಖೆ ನಡೆಸಿ, ಕೊಲೆಗಾರರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿ ಸಿಐಟಿಯು, ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ, ದಲಿತ ಹಕ್ಕುಗಳ ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಯಿತು.

ಆಲೂರು ತಾಲ್ಲೂಕಿನ ರಾಜನಹಳ್ಳಿ ಗ್ರಾಮದ ಆರ್.ಡಿ.ವೀರಪ್ಪ (58) ಅವರನ್ನು ಜಮೀನಿನಲ್ಲೇ ಹತ್ಯೆಗೈದು ಬರ್ಬರವಾಗಿ ಪೆಟ್ರೋಲ್ ಹಾಕಿ ಸುಟ್ಟುಹಾಕಿರುವ ಪ್ರಕರಣ ಇಡೀ ಜಿಲ್ಲೆಯನ್ನೇ ಬೆಚ್ಚಿಬೀಳಿಸಿತ್ತು. ಇಂತಹ

» ನಾಲ್ಕನೇ ಪುಟದಲ್ಲಿ

# ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ವಿವಾದ : ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರದ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ಕಳೆದ 30 ವರ್ಷಗಳಿಂದಲೂ ನಾನು ಪ್ರಸಾದ ವ್ಯವಸ್ಥೆ ಮಾಡುತ್ತಿದ್ದೆ. ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಸಾದ ನೀಡುವುದು ಬೇಡವೆಂಬ ವಿವಾದ ಸೃಷ್ಟಿಸಲಾಯಿತೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗ ಮುಜರಾಯಿ ಇಲಾಖೆಯಿಂದಲೇ ಪ್ರಸಾದ ನೀಡಲಾಗುತ್ತಿದೆ. ಈ ವರ್ಷ ರಥೋತ್ಸವದ ಪೂರ್ವಭಾವಿ ಸಭೆಗಳು ನಡೆದಾಗ ರಥಕ್ಕೆ ಹಳೆ ಬಟ್ಟೆ ತೆಗೆದು ಹೊಸ ಬಟ್ಟೆ ಹೊದಿಸುವ ಯಾವುದೇ ತೀರ್ಮಾನ ಆಗಿರಲಿಲ್ಲ. ಆದರೆ, ಯಾರೋ ಒಬ್ಬರು ಹೊಸ ಬಟ್ಟೆ ಕೊಡಿಸುವುದಾಗಿ ಹೇಳಿದರೆಂದು ದಿಢೀರನೆ ಹೊಸ ಬಟ್ಟೆ ಹೊದಿಸುವ ತೀರ್ಮಾನ ಮಾಡಲಾಗಿದೆಯಂತೆ. ಅದಕ್ಕೆ ನನ್ನ ವಿರೋಧವಿದೆ. ಹಾಗಿದ್ದರೆ ನಾನೇ 2 ಲಕ್ಷ ರೂ. ಖರ್ಚು ಮಾಡಿ ಹೊಸ ಬಟ್ಟೆ ಕೊಡಿಸುತ್ತಿದ್ದೆ. ಯಾರದೂ ಬೇಡ ಭಕ್ತರ ಕಾಣಿಕೆಯಿಂದ ಬಂದ ಹಣದಲ್ಲಿ ಮುಂದಿನ ವರ್ಷ ಹೊಸ ಬಟ್ಟೆ ಹೊದಿಸೋಣ. ಈ ವರ್ಷ ಹಳೆ ಬಟ್ಟೆಗಳನ್ನೇ ಹೊದಿಸಿ ರಥೋತ್ಸವ ನಡೆಸಲಿ ಎಂದರು.



ಇದಕ್ಕೆ ಹೊರತಾದ ಯಾವುದಾದರೂ ನಿರ್ಧಾರವನ್ನು ತಾಲ್ಲೂಕು ಹಾಗು ಜಿಲ್ಲಾಡಳಿತ ಕೈಗೊಂಡು ರಥೋತ್ಸವದ ವೇಳೆ ಏನಾದರೂ ಅಹಿತಕರ ಘಟನೆಗಳು ನಡೆದರೆ ಅದಕ್ಕೆ ತಹಶೀಲ್ದಾರ್ ಹಾಗು ಜಿಲ್ಲಾಧಿಕಾರಿ ಹೊಣೆಯಾಗಬೇಕಾಗುತ್ತದೆ. ಶಾಸಕನಾದ ನನ್ನ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನಕ್ಕೆ ಬೆಲೆ ಕೊಡದೆ ತಹಶೀಲ್ದಾರ್, ಜಿಲ್ಲಾಧಿಕಾರಿ ಬೇರೆ ತೀರ್ಮಾನ ಕೈಗೊಂಡರೆ ವಿಧಾನಸಭಾ ಅಧ್ಯಕ್ಷರಿಗೆ ದೂರು ನೀಡಿ ಹಕ್ಕುಚ್ಯುತಿ ನೋಟೀಸ್ ನೀಡುವಂತಹ ಕ್ರಮಕ್ಕೆ ಮುಂದಾಗಬೇಕಾಗುತ್ತದೆಂದು ಎಚ್ಚರಿಸಿದರು.

# ನಾಯಕತ್ವದ ವಿರುದ್ಧವೇ ಗುಡುಗಿದ ಕಾಂಗ್ರೆಸ್ ಮುಖಂಡರು

## ಕಾರ್ಯಕರ್ತರ ಕಡೆಗಣನೆ ಆರೋಪ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿವಾದವು ಭವಿಷ್ಯದಲ್ಲಿ ಕಾಂಗ್ರೆಸ್‌ನ ಇಮೇಜ್‌ಗೆ ಬಹು ದೊಡ್ಡ ಹೊಡೆತ ಕೊಡುವ ಸಾಧ್ಯತೆಗಳು ಹೆಚ್ಚುತ್ತಿರುವ ಹೊತ್ತಿನಲ್ಲಿಯೇ ಜಿಲ್ಲೆಯ ಬಹುತೇಕ ಕಾಂಗ್ರೆಸ್ ಮುಖಂಡರು ಪಕ್ಷದ ನಾಯಕರ ನಡೆಯ ವಿರುದ್ಧ ಬಹಿರಂಗವಾಗಿಯೇ ತಿರುಗಿ ಬಿದ್ದಿದ್ದಾರೆ.

ಭಾನುವಾರ ಸಂಜೆ ಮಾಜಿ ಶಾಸಕ ಸಿ.ಎಸ್. ಪುಟ್ಟೇಗೌಡ ಅವರ ನಿವಾಸದಲ್ಲಿ ಸೇರಿದ ಬೇಲೂರಿನ ಕಾಂಗ್ರೆಸ್ ಮುಖಂಡರಾದ ವೈ.ಎನ್.ಕೃಷ್ಣೇಗೌಡ, ಗ್ರಾನೈಟ್ ರಾಜಶೇಖರ್, ಸಮದ್, ಸಕಲೇಶಪುರದ ಭಾಸ್ಕರ್, ಡಿ.ಸಿ. ಸಣ್ಣಸ್ವಾಮಿ, ಅರಕಲಗೂಡಿನ ದೊಡ್ಡಮಗ್ಗೆ ಕೃಷ್ಣೇಗೌಡ, ಪ್ರಸನ್ನ, ಅರಸೀಕೆರೆ ಮೆಟ್ರೋ ಬಾಬು, ಜಾವಗಲ್ ಮಂಜುನಾಥ್, ಹಾಸನದ ಹೆಚ್.ಕೆ.ಮಹೇಶ್, ಚನ್ನರಾಯ ಪಟ್ಟಣದ ಸಿ.ಎಸ್.ಪುಟ್ಟೇಗೌಡ, ಹೆಚ್.ಎಸ್.ವಿಜಯಕುಮಾರ್, ಬಾಗೂರು ಮಂಜೇಗೌಡ, ಶಂಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್ ಸೇರಿ ಹಲವು ಮುಖಂಡರು ಪಕ್ಷದ ನಾಯಕರ ವಿರುದ್ಧ ತಮ್ಮ ಅಂತರಾಳದ ಕಿಚ್ಚನ್ನು ಹೊರಹಾಕಿದರು.



ಅರಕಲಗೂಡು ಕ್ಷೇತ್ರದ ದೊಡ್ಡಮಗ್ಗೆಯ ಕೃಷ್ಣೇಗೌಡ ಅವರು ಮಾತನಾಡಿ, ಚುನಾವಣೆಗೂ ಮುನ್ನ ನಡೆದ ಕಾಂಗ್ರೆಸ್ ಸಭೆಗಳು, ಸಮಾವೇಶಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನೂರಾರು ವಾಹನಗಳಲ್ಲಿ ಜನರನ್ನು ಕರೆದೊಯ್ದೆ. ಆದರೆ, ಆ ಕ್ರೆಡಿಟ್‌ನ್ನು ಪಕ್ಷದ ಉಸ್ತುವಾರಿ ಎನಿಸಿಕೊಂಡಿದ್ದ ಅನಿಲ್ ಎಂಬುವವರು ಪಡೆದುಕೊಂಡರು. ತಮಗೆ ಟಿಕೆಟ್ ನೀಡುವ ಖಚಿತ ಭರವಸೆ ಕೊಟ್ಟು ಕೊನೆ ಘಳಿಗೆಯಲ್ಲಿ ಕೈ ಚಲ್ಲಿದರು. ಈಗ ಸಹ ಮೂಲ ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲವೆಂದು ತಮ್ಮ ಅಳಲು ತೋಡಿಕೊಂಡರು.

ಕೆಪಿಸಿಸಿ ಸದಸ್ಯ ಹೆಚ್.ಕೆ.ಮಹೇಶ್ ಅವರು ಮಾತನಾಡಿ, ಗ್ಯಾರಂಟಿ ಯೋಜನೆ ಗಳಿಂದ ಚುನಾವಣೆ ಗೆಲ್ಲುತ್ತೇವೆಂಬ ಭ್ರಮೆಯಿಂದ ಹೊರಬರಬೇಕು. ಜೆಡಿಎಸ್ ಕಥೆ ಮುಗಿಯಿತು ಎಂದು ಕೊಂಡರೆ ಅದು ಭ್ರಮೆಯಾಗುತ್ತದೆ. ಜಿಲ್ಲೆಯಲ್ಲಿ ಪಕ್ಷ ಸಂಘಟಿಸಬೇಕೆಂಬ ಆಸಕ್ತಿ ರಾಜ್ಯ ನಾಯಕರಿಗಿಲ್ಲ. ನಾವು ಜಿಲ್ಲಾ ಉಸ್ತುವಾರಿ ಸಚಿವರನ್ನು ಪ್ರಶ್ನಿಸಲು ಆಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಹೇಳಿದರೆ ಏನೂ ಆಗುವುದಿಲ್ಲ. ಕಾರ್ಯಕರ್ತರು ಏನಾದರೂ ಅಹವಾಲು ಇದ್ದರೆ ತಂದು ಕೊಡಿ, ಕಾನೂನು ಇದ್ದರೆ ಕೆಲಸ ಮಾಡಿ ಕೊಡುತ್ತೇನೆಂದು ಮೊದಲ ಸಭೆಯಲ್ಲೇ ಹೇಳಿದ್ದಾರೆ. ನಾವು ಅವರನ್ನು ಪ್ರಶ್ನಿಸಲು ಸಾಧ್ಯವಿಲ್ಲ. ನಮ್ಮ ಕಾರ್ಯಕರ್ತ ಟ್ರಾಫಿಕ್ ಪೊಲೀಸರ ಕೈಗೆ ಸಿಲುಕಿದರೆ ಆತನನ್ನು ಬಿಡಿಸಲಾಗದಷ್ಟು ಅಸಹಾಯಕರಾಗಿದ್ದೇವೆಂದರು.

ನಾವೆಲ್ಲರೂ ಪ್ರಶ್ನೆ ಮಾಡದಿದ್ದರೆ ಯಾವ ನಾಯಕರಿಂದಲೂ ಅನುಕೂಲ ಆಗುವುದಿಲ್ಲ. ಸಾರ್ ಅಂತ ಹೋದರೆ ಪ್ರಯೋಜನ ಆಗುವುದಿಲ್ಲ. ಇವರು ಹೆಂಗಿದ್ರೂ ನಮ್ ಮನೆ ಗೇಟ್ ಕಾಯ್ತರೆ ಅನ್ಕೋತಾರೆ. ಕೆಲವರ ಮನೆ ಮುಂದೆ ಹೋದರೆ ಏಜೆಂಟರು ಇರುತ್ತಾರೆ ಹೊರತು ನಿಜವಾದ ಕಾರ್ಯಕರ್ತರು ಇರುವುದಿಲ್ಲ. ಮೇಲ್ಮಟ್ಟದವರು ಸರಿಯಾಗದಿದ್ದರೆ ನಾವೇನೂ ಮಾಡೋಕೆ ಆಗುವುದಿ ಲ್ಲವೆಂದರು.

» ನಾಲ್ಕನೇ ಪುಟದಲ್ಲಿ

### ಪರಾಜಿತ ಅಭ್ಯರ್ಥಿಗಳಿಗೆ ಅಧಿಕಾರ: ಆಕ್ರೋಶ

ವಿಧಾನಸಭೆ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳನ್ನು ಕಾಂಗ್ರೆಸ್ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷರನ್ನಾಗಿಸಿ ಅಧಿಕಾರ ನೀಡಲಾಗಿದೆ. ಅವರು ಹೇಗೋ ರಾಜಕೀಯದಲ್ಲಿ ಸಕ್ರಿಯರಾಗಿದ್ದಾರೆ. ಅವರನ್ನು ಬಿಟ್ಟು ಉಳಿದವರಿಗೆ ಯಾವ ಗೌರವ ನೀಡಿದ್ದೀರಿ ಎಂದು ಅಸಮಾಧಾನಿತ ನಾಯಕರು ಪ್ರಶ್ನಿಸಿದ್ದಾರೆ.

ಸಕಲೇಶಪುರ, ಅರಕಲಗೂಡು, ಹಾಸನ ಕ್ಷೇತ್ರಗಳಲ್ಲಿ ಪರಾಜಿತರೇ ಅವಕಾಶ ಪಡೆದಿದ್ದು, ಬೇಲೂರು, ಅರಸೀಕೆರೆ, ಹೊಳೆನರಸೀಪುರ, ಚನ್ನರಾಯಪಟ್ಟಣದಲ್ಲಿ ಬೇರೆಯವರು ಅಧ್ಯಕ್ಷರಾಗಿದ್ದಾರೆ. ಅಂತಹವರು ಮಾತ್ರ ಸಂಸದ ಶ್ರೇಯಸ್ ಪಟೇಲ್, ಶಾಸಕ ಕೆ.ಎಂ.ಶಿವಲಿಂಗೇಗೌಡರ ಜೊತೆಗಿರುತ್ತಾರೆ. ಉಳಿದವರು ಏನು ಮಾಡಬೇಕೆಂದು ಖಾರವಾಗಿ ಪ್ರಶ್ನಿಸಿದರು.

ರಾಜ್ಯ ವಿದ್ಯುತ್ ನಿಗಮ ಮಂಡಳಿ ಅಧ್ಯಕ್ಷರಾಗಿ ಸಚಿವ ಸ್ಥಾನಮಾನ ಗಿಟ್ಟಿಸಿಕೊಂಡ ಲಲಿತ್ ರಾಘವ್ ಅವರಿಗೆ ಕನಿಷ್ಠ ಸನ್ಮಾನಿಸುವ ಔದಾರ್ಯವನ್ನು ತೋರಿಲ್ಲವೆಂದು ಆಕ್ರೋಶ ಕೇಳಿ ಬಂತು.

# ಮಾ.5ಕ್ಕೆ ಬಾಳ್ಳುಪೇಟೆಯಲ್ಲಿ ಶಿವಕುಮಾರ ಶ್ರೀ ಸ್ಮರಣೆ

• ಪ್ರಜೋದಯ ವರದಿ

**ಹಾಸನ:** ತ್ರಿವಿಧ ದಾಸೋಹಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸ್ಮರಣೆಯನ್ನು ಬಾಳ್ಳುಪೇಟೆ ಸ್ನೇಹ ಬಳಗದಿಂದ ಪಟ್ಟಣದ ಬಿ.ಸಿದ್ದಣ್ಣಯ್ಯ ಪ್ರೌಢಶಾಲಾ ಆವರಣದಲ್ಲಿ ಮಾ.5ರ ಗುರುವಾರ ಆಯೋಜಿಸಲಾಗಿದೆ ಎಂದು ಸ್ನೇಹ ಬಳಗದ ಯಡೇಹಳ್ಳಿ ಆರ್. ಮಂಜುನಾಥ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ 5 ಸಾವಿರ ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ. ಸಿದ್ದಗಂಗಾ ಮಠದ ಕಿರಿಯ ಸ್ವಾಮೀಜಿ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಆದಿಚುಂಚನಗಿರಿ ಶಾಖಾಮಠದ ಶ್ರೀ ಶಂಭುನಾಥ ಸ್ವಾಮೀಜಿ, ಸಂಕಲಾಪುರ ಮಠದ ಧರ್ಮರಾಜೇಂದ್ರ ಸ್ವಾಮೀಜಿ, ಕೊಡ್ಲಿಪೇಟೆ ಕಲ್ಮಠದ ಮಹಾಂತ ಸ್ವಾಮೀಜಿ, ಕಿರಿಕೊಡ್ಲಿಮಠದ ಸದಾಶಿವ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಮುಖ್ಯ ಭಾಷಣ ಮಾಡಲಿದ್ದಾರೆ. ಶಾಸಕ ಸಿಮೆಂಟ್ ಮಂಜು ಸೇರಿ ಅನೇಕರು ಭಾಗವಹಿಸಲಿದ್ದಾರೆಂದರು. ಬೆಳಿಗ್ಗೆ 9 ಗಂಟೆಗೆ ಗ್ರಾಮದೇವತೆ ದೇವಿರಮ್ಮ ದೇವಸ್ಥಾನದ ಆವರಣದಿಂದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರದೊಂದಿಗೆ ಪೂರ್ಣ ಕುಂಭ ಮೆರವಣಿಗೆ ಆರಂಭವಾಗಲಿದೆ. ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಗ್ರಾಮದ ರಾಜ ಬೀದಿಯಲ್ಲಿ ತರೀಕೆರೆಯ ಶ್ರೀ ಗುರುವೀರ ಮಹಿಳಾ ವೀರಗಾಸೆ ಕಲಾತಂಡ ಗಳೊಂದಿಗೆ ಮೆರವಣಿಗೆ ಸಾಗಲಿದೆ. ನಂತರ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ಮೆರವಣಿಗೆ ನಂತರ ರಕ್ತದಾನ ಶಿಬಿರ ನಡೆಯಲಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪುರಸ್ಕಾರ, ಅನಾಥ ಹಾಗು ದಿವ್ಯಾಂಗ ಮಕ್ಕಳನ್ನು ದತ್ತು ಪಡೆದು 10ನೇ ತರಗತಿ ಓದುವವರೆಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುವುದೆಂದರು. ಸುದ್ದಿಗೋಷ್ಠಿಯಲ್ಲಿ ಸ್ನೇಹ ಬಳಗದ ಎಂ.ಎಸ್. ಚಂದ್ರಶೇಖರ್, ನೇತ್ರಾ, ಮಂಜುನಾಥ್ ಇತರರಿದ್ದರು.

# ಇಂದು ವಿಶ್ವ ವನ್ಯಜೀವಿಗಳ ದಿನ

## ಮಾನವ ಸ್ವಾರ್ಥದಿಂದ ಅಳಿವಿನಂಚಿನತ್ತ ಪ್ರಾಣಿ ಸಂಕುಲ

### ವಿಶ್ವ ವನ್ಯಜೀವಿ ದಿನ 2026 ನಮ್ಮ ಗ್ರಹ ಮತ್ತು ಭಾರತಕ್ಕೆ ಏಕೆ ಮುಖ್ಯವಾಗಿದೆ?

ಪ್ರತಿಯೊಂದು ಮರ, ನದಿ, ಕಾಡು ಮತ್ತು ಕಾಡು ಪ್ರಾಣಿಗಳು ಮಾನವ ಜೀವನವನ್ನು ಸದ್ದಿಲ್ಲದೆ ಬೆಂಬಲಿಸುತ್ತವೆ. ಕಾಡುಗಳು ಇರುವುದರಿಂದ ನಾವು ಶುದ್ಧ ಗಾಳಿಯನ್ನು ಉಸಿರಾಡುತ್ತೇವೆ, ಪರಿಸರ ವ್ಯವಸ್ಥೆಗಳು ಆರೋಗ್ಯಕರವಾಗಿರುವುದರಿಂದ ನಮಗೆ ನೀರು ಸಿಗುತ್ತದೆ ಮತ್ತು ಪ್ರಕೃತಿ ಸಮತೋಲನದಲ್ಲಿ ಇರುವುದರಿಂದ ನಾವು ಬದುಕುಳಿಯುತ್ತೇವೆ. ವಿಶ್ವ ವನ್ಯಜೀವಿ ದಿನ 2026 ನಾವು ವನ್ಯಜೀವಿಗಳಿಗೆ ಹಾನಿ ಮಾಡಿದರೆ, ವಾಸ್ತವವಾಗಿ ನಮ್ಮ ಭವಿಷ್ಯಕ್ಕೆ ಹಾನಿ ಮಾಡಿಕೊಳ್ಳುತ್ತಿದ್ದೇವೆ ಎಂಬುದನ್ನು ನೆನಪಿಸುತ್ತದೆ.



ಪ್ರತಿ ವರ್ಷ ಮಾರ್ಚ್ 3 ರಂದು, ವಿಶ್ವ ವನ್ಯಜೀವಿ ದಿನವನ್ನು ಆಚರಿಸಲು ಮತ್ತು ಕಾಡು ಪ್ರಾಣಿಗಳು ಮತ್ತು ಸಸ್ಯಗಳನ್ನು ಹೇಗೆ ರಕ್ಷಿಸುವುದು ಎಂಬುದರ ಕುರಿತು ಮಾತನಾಡಲು ಜಗತ್ತು ಒಟ್ಟಾಗಿ ಬರುತ್ತದೆ. ವಿಶ್ವ ವನ್ಯಜೀವಿ ದಿನ 2026 ನಮ್ಮ ಅಭ್ಯಾಸಗಳನ್ನು ಪುನರ್ವಿಮರ್ಶಿಸಲು, ನಮ್ಮ ದುರಾಸೆಯನ್ನು ಕಡಿಮೆ ಮಾಡಲು ಮತ್ತು ಸಣ್ಣ ಕೀಟದಿಂದ ಹಿಡಿದು ಬೃಹತ್ ಆನೆಯವರೆಗೆ ಪ್ರತಿಯೊಂದು ರೀತಿಯ ಜೀವನವನ್ನು ಗೌರವಿಸಲು ಒಂದು ಪ್ರಮುಖ ಕ್ಷಣವಾಗಿದೆ.

**ಕಾಡುಗಳಿಂದ ಸಾಗರಗಳವರೆಗೆ – ವನ್ಯಜೀವಿಗಳು ಭೂಮಿಯ ಜೀವರಾಶಿ ಏಕೆ?**

ವನ್ಯಜೀವಿಗಳು ಎಂದರೆ ಕೇವಲ ಹುಲಿಗಳು, ಸಿಂಹಗಳು ಅಥವಾ ಚಲನಚಿತ್ರಗಳಲ್ಲಿ ತೋರಿಸಲಾದ ಪ್ರಸಿದ್ಧ ಪ್ರಾಣಿಗಳಲ್ಲ. ಇದು ನಮ್ಮ ಗಾಳಿ, ನೀರು ಮತ್ತು ಮಣ್ಣನ್ನು ಸ್ವಚ್ಛವಾಗಿಡುವ ಪ್ರತಿಯೊಂದು ಸಸ್ಯ, ಪಕ್ಷಿ, ಮೀನು, ಕೀಟ ಮತ್ತು ಸೂಕ್ಷ್ಮಜೀವಿಗಳನ್ನು ಒಳಗೊಂಡಿದೆ. ಆರೋಗ್ಯಕರ ವನ್ಯಜೀವಿಗಳು:

★ ಆಹಾರ ಸರಪಳಿಗಳು ಮತ್ತು ಆಹಾರ ಜಾಲಗಳನ್ನು ನಿರ್ವಹಿಸುತ್ತದೆ

★ ಬೆಳೆಗಳ ಪರಾಗಸ್ಪರ್ಶವನ್ನು ಬೆಂಬಲಿಸುತ್ತದೆ

★ ಮಣ್ಣು ಮತ್ತು ಜಲ ಸಂಪನ್ಮೂಲಗಳನ್ನು ರಕ್ಷಿಸುತ್ತದೆ

★ ರೋಗಗಳು ಮತ್ತು ಕೀಟಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ

ಪ್ರಭೇದಗಳು ಕಣ್ಮರೆಯಾದಾಗ, ಸಮತೋಲನವು ಮುರಿದುಹೋಗುತ್ತದೆ ಮತ್ತು ನಿಧಾನವಾಗಿ ಗ್ರಹವು ಹೆಚ್ಚು ದುರ್ಬಲವಾಗುತ್ತದೆ. ಅದಕ್ಕಾಗಿಯೇ ವಿಶ್ವ ವನ್ಯಜೀವಿ ದಿನ 2026 ಕೇವಲ ಆಚರಣಾ ದಿನ ಮಾತ್ರವಲ್ಲದೆ ನಮಗೆಲ್ಲರಿಗೂ ಗಂಭೀರ ಎಚ್ಚರಿಕೆಯಾಗಿದೆ.

ವಿರಾಮಗೊಳಿಸಲು, ಕಲಿಯಲು ಮತ್ತು ಕ್ರಮ ತೆಗೆದುಕೊಳ್ಳಲು ಒಂದು ಅವಕಾಶ: ಈ ದಿನದಂದು ಶಾಲೆಗಳು, ಕಾಲೇಜುಗಳು, ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಸಮುದಾಯಗಳು ರ್ಯಾಲಿಗಳು, ರಸಪ್ರಶ್ನೆಗಳು, ತೋಟಗಾರಿಕೆ ಡ್ರೈವ್‌ಗಳು, ಪ್ರಕೃತಿ ನಡಿಗೆಗಳು ಮತ್ತು ಜಾಗೃತಿ ಅವಧಿಗಳಂತಹ ಚಟುವಟಿಕೆಗಳನ್ನು ನಡೆಸುತ್ತವೆ. ವಿದ್ಯಾರ್ಥಿಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳಿಗೆ, ಇದು ಜಿಕೆ, ಪ್ರಬಂಧಗಳು ಮತ್ತು ಸಂದರ್ಶನಗಳಿಗೆ ಸೂಕ್ತ ವಿಷಯವಾಗಿದೆ.

**ವಿಶ್ವ ವನ್ಯಜೀವಿ ದಿನ ಎಂದರೇನು?:** 2026 ರ ವಿಶ್ವ ವನ್ಯಜೀವಿ ದಿನವನ್ನು ಯಾವಾಗ ಆಚರಿಸಲಾಗುತ್ತದೆ ಮತ್ತು ಈ ದಿನಾಂಕ ಏಕೆ ಮುಖ್ಯವಾಗಿದೆ: ವಿಶ್ವ ವನ್ಯಜೀವಿ ದಿನವನ್ನು ಪ್ರತಿ ವರ್ಷ ಮಾರ್ಚ್ 3 ರಂದು ಆಚರಿಸಲಾಗುತ್ತದೆ . 1973 ರ ಮಾರ್ಚ್ 3 ರಂದು ಪ್ರಾರಂಭವಾದ ಅಳಿವಿನಂಚಿನಲ್ಲಿರುವ ಪ್ರಭೇದಗಳಾದ ಕಾಡು ಪ್ರಾಣಿ ಮತ್ತು ಸಸ್ಯಗಳ ಅಂತರರಾಷ್ಟ್ರೀಯ ವ್ಯಾಪಾರದ ಸಮಾವೇಶವನ್ನು ಅಂಗೀಕರಿಸುವ ಸಲುವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2013 ರಲ್ಲಿ ಈ ದಿನವನ್ನು ಘೋಷಿಸಿತು. ಹಾಗಾಗಿ, ಮಾರ್ಚ್ 3, 2026 ರಂದು ನಡೆಯುವ ವಿಶ್ವ ವನ್ಯಜೀವಿ ದಿನವು ಅಕ್ರಮ ವನ್ಯಜೀವಿ ವ್ಯಾಪಾರವನ್ನು ನಿಯಂತ್ರಿಸುವ ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ರಕ್ಷಿಸುವ ಜಾಗತಿಕ ಪ್ರಯತ್ನದ 53 ವರ್ಷಗಳನ್ನು ಗುರುತಿಸುತ್ತದೆ.




**ವಿಶ್ವ ವನ್ಯಜೀವಿ ದಿನದ ಇತಿಹಾಸ – ವಿಶ್ವಸಂಸ್ಥೆಯ ನಿರ್ಣಯದಿಂದ ಜಾಗತಿಕ ಚಳುವಳಿಯವರೆಗೆ:** ಆರಂಭದಲ್ಲಿ, ಈ ದಿನವು ಮುಖ್ಯವಾಗಿ CITES ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳೊಂದಿಗೆ ಸಂಬಂಧ ಹೊಂದಿತ್ತು. ಆದರೆ ಕಾಲಾನಂತರದಲ್ಲಿ, ಇದು ಜಾಗತಿಕ ಚಳುವಳಿಯಾಗಿ ಬೆಳೆದಿದೆ, ಇದರಲ್ಲಿ ಇವು ಸೇರಿವೆ:

★ ಸರ್ಕಾರಗಳು

★ ಪರಿಸರ ಸಂಸ್ಥೆಗಳು

★ ಸ್ಥಳೀಯ ಸಮುದಾಯಗಳು

★ ಯುವಕರು ಮತ್ತು ಶಾಲೆಗಳು

ಇಂದು, 2026 ರ ವಿಶ್ವ ವನ್ಯಜೀವಿ ದಿನವನ್ನು ಪ್ರಪಂಚದ ಬಹುತೇಕ ಎಲ್ಲಾ ಪ್ರದೇಶಗಳಲ್ಲಿ ಅಭಿಯಾನಗಳು, ಚಲನಚಿತ್ರಗಳು, ಕಲಾ ಸ್ಪರ್ಧೆಗಳು ಮತ್ತು ನೀತಿ ಚರ್ಚೆಗಳ ಮೂಲಕ ಆಚರಿಸಲಾಗುತ್ತದೆ.

2026 ರ ವಿಶ್ವ ವನ್ಯಜೀವಿ ದಿನದ ಥೀಮ್ ಮತ್ತು ಅದು ನಾವು ಯಾವುದರ ಮೇಲೆ ಗಮನಹರಿಸಬೇಕೆಂದು ಬಯಸುತ್ತದೆ

**2026 ರ ವಿಶ್ವ ವನ್ಯಜೀವಿ ದಿನದ ಅಧಿಕೃತ ಥೀಮ್:** ಔಷಧೀಯ ಮತ್ತು ಪರಿಮಳಯುಕ್ತ ಸಸ್ಯಗಳು: ಆರೋಗ್ಯ, ಪರಂಪರೆ ಮತ್ತು ಜೀವನೋಪಾಯಗಳ ಸಂರಕ್ಷಣೆ.

ಈ ವಿಷಯವು ನಮಗೆ ಔಷಧಿಗಳು, ಸಾರಭೂತ ತೈಲಗಳು, ಸುಗಂಧ ದ್ರವ್ಯಗಳು, ಗಿಡಮೂಲಿಕೆ ಉತ್ಪನ್ನಗಳು ಮತ್ತು ಸಾಂಪ್ರದಾಯಿಕ ಪರಿಹಾರಗಳನ್ನು ನೀಡುವ ಸಸ್ಯಗಳನ್ನು ಎತ್ತಿ ತೋರಿಸುತ್ತದೆ. ಈ ಔಷಧೀಯ ಮತ್ತು ಆರೊಮ್ಯಾಟಿಕ್ ಸಸ್ಯಗಳಲ್ಲಿ (ಎಮ್‌ಎಪಿ ಗಳು) ಹಲವು ಕಾಡಿನಿಂದ ತೆಗೆದುಕೊಳ್ಳಲ್ಪಟ್ಟಿದ್ದು, ಅತಿಯಾದ ಕೊಯ್ಲು, ಆವಾಸಸ್ಥಾನ ನಷ್ಟ ಮತ್ತು ಹವಾಮಾನ ಬದಲಾವಣೆಯಿಂದಾಗಿ ಒತ್ತಡದಲ್ಲಿವೆ.

**ಸಂದೇಶ ಸ್ಪಷ್ಟವಾಗಿದೆ:** ನಮಗೆ ಉತ್ತಮ ಆರೋಗ್ಯ, ಬಲವಾದ ಸಂಸ್ಕೃತಿ ಮತ್ತು ಸುಸ್ಥಿರ ಜೀವನೋಪಾಯ ಬೇಕಾದರೆ, ಈ ಮೂರನ್ನೂ ಸದ್ದಿಲ್ಲದೆ ಬೆಂಬಲಿಸುವ ಕಾಡು ಸಸ್ಯಗಳನ್ನು ನಾವು ರಕ್ಷಿಸಬೇಕು.

**2026 ರ ವಿಶ್ವ ವನ್ಯಜೀವಿ ದಿನ ಭಾರತಕ್ಕೆ ಏಕೆ ಮುಖ್ಯವಾಗಿದೆ?**

**ಭಾರತವು ಬೃಹತ್ ಜೀವವೈವಿಧ್ಯ ರಾಷ್ಟ್ರವಾಗಿದೆ:** ಭಾರತವು ವಿಶ್ವದ 17 ಬೃಹತ್ ಜೀವವೈವಿಧ್ಯ ರಾಷ್ಟ್ರಗಳಲ್ಲಿ ಒಂದಾಗಿದೆ. ಹಿಮಾಲಯದಿಂದ ಪಶ್ಚಿಮ ಘಟ್ಟಗಳವರೆಗೆ, ಥಾರ್ ಮರುಭೂಮಿಯಿಂದ ಸುಂದರಬನಗಳವರೆಗೆ, ಭಾರತವು ಈ ಕೆಳಗಿನವುಗಳನ್ನು ಹೊಂದಿದೆ:

★ ಹುಲಿಗಳು, ಆನೆಗಳು, ಒಂಟಿ ಕೊಂಬಿನ ಖಡ್ಗಮೃಗಗಳು ಮತ್ತು ಏಷ್ಯನ್ ಸಿಂಹಗಳಂತಹ ಪ್ರಸಿದ್ಧ ಸಸ್ತನಿಗಳು

★ ಕ್ರೇನ್‌ಗಳು, ಹಾರ್ನ್‌ಬಿಲ್‌ಗಳು, ಹಿಂಸ್ರಪಕ್ಷಿಗಳು ಮತ್ತು ವಲಸೆ ಬರುವ ಜಲಪಕ್ಷಿಗಳು ಸೇರಿದಂತೆ ಶ್ರೀಮಂತ ಪಕ್ಷಿ ಸಂಕುಲ

★ ಅಪರೂಪದ ಸರೀಸೃಪಗಳು, ಉಭಯಚರಗಳು, ಚಿಟ್ಟೆಗಳು ಮತ್ತು ಸಾವಿರಾರು ಸಸ್ಯ ಪ್ರಭೇದಗಳು

ಈ ಕಾರಣದಿಂದಾಗಿ, ವಿಶ್ವ ವನ್ಯಜೀವಿ ದಿನ 2026 ಭಾರತಕ್ಕೆ ವಿಶೇಷ ಅರ್ಥವನ್ನು ಹೊಂದಿದೆ – ಭಾರತೀಯ ವನ್ಯಜೀವಿಗಳನ್ನು ರಕ್ಷಿಸುವುದು ಎಂದರೆ ಜಾಗತಿಕ ಜೀವವೈವಿಧ್ಯದ ದೊಡ್ಡ ಭಾಗವನ್ನು ರಕ್ಷಿಸುವುದು.

**ಹವಾಮಾನ ಸಮತೋಲನದಲ್ಲಿ ಭಾರತೀಯ ಕಾಡುಗಳು, ನದಿಗಳು ಮತ್ತು ಜೌಗು ಪ್ರದೇಶಗಳ ಪಾತ್ರ:** ಭಾರತೀಯ ಕಾಡುಗಳು ಇಂಗಾಲ ಹೀರಿಕೊಳ್ಳುವ ಸಾಧನವಾಗಿ ಕಾರ್ಯನಿರ್ವಹಿಸುತ್ತವೆ, ನದಿಗಳು ಕೃಷಿಯನ್ನು ಬೆಂಬಲಿಸುತ್ತವೆ ಮತ್ತು ಜೌಗು ಪ್ರದೇಶಗಳು ನೀರನ್ನು ಸಂಗ್ರಹಿಸುತ್ತವೆ ಮತ್ತು ಪಕ್ಷಿಗಳು ಮತ್ತು ಮೀನುಗಳನ್ನು ಬೆಂಬಲಿಸುತ್ತವೆ. ಈ ಪರಿಸರ ವ್ಯವಸ್ಥೆಗಳು ಹಾನಿಗೊಳಗಾದರೆ, ಪ್ರವಾಹ, ಬರ ಮತ್ತು ಶಾಖದ ಅಲೆಗಳಂತಹ ಹವಾಮಾನ ಬದಲಾವಣೆಯ ಪರಿಣಾಮಗಳು ಹೆಚ್ಚು ಆಗಾಗ್ಗೆ ಮತ್ತು ತೀವ್ರವಾಗುತ್ತವೆ.

**ಪ್ರಾಣಿಗಳು ಮತ್ತು ಪ್ರಕೃತಿಯೊಂದಿಗೆ ಭಾರತೀಯರ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಂಪರ್ಕ:** ಭಾರತದಲ್ಲಿ, ಅನೇಕ ಪ್ರಾಣಿಗಳು ದೇವರುಗಳು, ದೇವತೆಗಳು ಮತ್ತು ಸಾಂಪ್ರದಾಯಿಕ ನಂಬಿಕೆಗಳೊಂದಿಗೆ ಸಂಬಂಧ ಹೊಂದಿವೆ. ಅರಳಿ ಮತ್ತು ಬೇವಿನಂತಹ ಮರಗಳು, ಗಂಗಾದಂತಹ ನದಿಗಳು ಮತ್ತು ಹಸು, ಹಾವು ಅಥವಾ ಆನೆಯಂತಹ ಪ್ರಾಣಿಗಳು ಆಳವಾದ ಸಾಂಸ್ಕೃತಿಕ ಮಹತ್ವವನ್ನು ಹೊಂದಿವೆ. ಅದಕ್ಕಾಗಿಯೇ ವನ್ಯಜೀವಿಗಳನ್ನು ರಕ್ಷಿಸುವುದು ಕೇವಲ ಪರಿಸರ ಕರ್ತವ್ಯವಲ್ಲ; ಅದು ನಮ್ಮ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಜವಾಬ್ದಾರಿಯ ಭಾಗವಾಗಿದೆ – ಇದನ್ನು 2026 ರ ವಿಶ್ವ ವನ್ಯಜೀವಿ ದಿನವು ನಮಗೆ ಬಲವಾಗಿ ನೆನಪಿಸುತ್ತದೆ.

**2026 ರಲ್ಲಿ ವನ್ಯಜೀವಿಗಳಿಗೆ ಪ್ರಮುಖ ಬೆದರಿಕೆಗಳು – ಜಾಗತಿಕ ಮತ್ತು ಭಾರತೀಯ ಸಂದರ್ಭ**

**ಆವಾಸಸ್ಥಾನ ನಷ್ಟ ಮತ್ತು ಅರಣ್ಯನಾಶ:** ರಸ್ತೆಗಳು, ಗಣಿಗಾರಿಕೆ, ನಗರಗಳು, ಕೃಷಿಭೂಮಿಗಳು ಮತ್ತು ಕೈಗಾರಿಕೆಗಳಿಗಾಗಿ ಕಾಡುಗಳನ್ನು ಕಡಿಯಲಾಗುತ್ತಿದೆ. ಆವಾಸಸ್ಥಾನಗಳು ಕುಗ್ಗಿದಾಗ, ಪ್ರಾಣಿಗಳು ಸಣ್ಣ ಪ್ರದೇಶಗಳಿಗೆ ಬಲವಂತವಾಗಿ ವಲಸೆ ಹೋಗುತ್ತವೆ, ಇದು ಸಂಘರ್ಷ ಮತ್ತು ಜನಸಂಖ್ಯೆಯಲ್ಲಿ ಇಳಿಕೆಗೆ ಕಾರಣವಾಗುತ್ತದೆ.

**ಬೇಟೆಯಾಡುವುದು, ಅಕ್ರಮ ವನ್ಯಜೀವಿ ವ್ಯಾಪಾರ ಮತ್ತು ಮಾನವ–ಪ್ರಾಣಿ ಸಂಘರ್ಷ:** ಚರ್ಮ, ಕೊಂಬುಗಳು, ದಂತಗಳು, ಮಾಂಸ ಮತ್ತು ಜೀವಂತ ಪ್ರಾಣಿಗಳ ವ್ಯಾಪಾರಕ್ಕಾಗಿ ಬೇಟೆಯಾಡುವುದು ಅನೇಕ ಪ್ರದೇಶಗಳಲ್ಲಿ ಇನ್ನೂ ಮುಂದುವರೆದಿದೆ. ಆಹಾರ ಮತ್ತು ನೀರನ್ನು ಹುಡುಕುತ್ತಾ ಪ್ರಾಣಿಗಳು ಹಳ್ಳಿಗಳು ಅಥವಾ ತೋಟಗಳ ಬಳಿ ಹೋದಾಗ ಮಾನವ–ಪ್ರಾಣಿ ಸಂಘರ್ಷವೂ ಹೆಚ್ಚಾಗುತ್ತದೆ.

**ಹವಾಮಾನ ಬದಲಾವಣೆ, ಮಾಲಿನ್ಯ ಮತ್ತು ಕುಗ್ಗುತ್ತಿರುವ ನೈಸರ್ಗಿಕ ಸ್ಥಳಗಳು:** ಹೆಚ್ಚುತ್ತಿರುವ ತಾಪಮಾನ, ಅನಿಯಮಿತ ಮಳೆ, ಕಾಡಿನ ಬೆಂಕಿ, ಪ್ಲಾಸ್ಟಿಕ್ ಮಾಲಿನ್ಯ ಮತ್ತು ರಾಸಾಯನಿಕ ಮಾಲಿನ್ಯವು ಈಗಾಗಲೇ ಅಪಾಯದಲ್ಲಿರುವ ಆವಾಸಸ್ಥಾನಗಳ ಮೇಲೆ ಹೆಚ್ಚುವರಿ ಒತ್ತಡವನ್ನು ಸೃಷ್ಟಿಸುತ್ತಿದೆ.

2026 ರ ವಿಶ್ವ ವನ್ಯಜೀವಿ ದಿನವು ಸರ್ಕಾರಗಳು ಮತ್ತು ನಾಗರಿಕರು ಈ ಬೆದರಿಕೆಗಳನ್ನು ಪ್ರಾಮಾಣಿಕವಾಗಿ ಎದುರಿಸಲು ಮತ್ತು ಸರಿಪಡಿಸುವ ಕ್ರಮ ಕೈಗೊಳ್ಳಲು ಪ್ರೋತ್ಸಾಹಿಸುತ್ತದೆ.

ಭಾರತ ತನ್ನ ವನ್ಯಜೀವಿಗಳನ್ನು ಹೇಗೆ ರಕ್ಷಿಸುತ್ತದೆ – ಕಾನೂನುಗಳು, ಯೋಜನೆಗಳು ಮತ್ತು ಸಮುದಾಯ ಪ್ರಯತ್ನಗಳು

**ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು ಸಂರಕ್ಷಿತ ಪ್ರದೇಶಗಳು:** ವನ್ಯಜೀವಿಗಳನ್ನು ರಕ್ಷಿಸಲು ಭಾರತದ ಪ್ರಮುಖ ಕಾನೂನು ವನ್ಯಜೀವಿ (ರಕ್ಷಣೆ) ಕಾಯ್ದೆ, 1972. ಇದರ ಅಡಿಯಲ್ಲಿ, ವಿವಿಧ ರೀತಿಯ ಸಂರಕ್ಷಿತ ಪ್ರದೇಶಗಳನ್ನು ರಚಿಸಲಾಗಿದೆ, ಅವುಗಳೆಂದರೆ:

★ ರಾಷ್ಟ್ರೀಯ ಉದ್ಯಾನವನಗಳು

★ ವನ್ಯಜೀವಿ ಅಭಯಾರಣ್ಯಗಳು

★ ಸಂರಕ್ಷಣಾ ಮೀಸಲುಗಳು

★ ಸಮುದಾಯ ಮೀಸಲುಗಳು




ಇತ್ತೀಚಿನ ಮಾಹಿತಿಯ ಪ್ರಕಾರ, ಭಾರತವು 107 ರಾಷ್ಟ್ರೀಯ ಉದ್ಯಾನವನಗಳು ಮತ್ತು 570 ಕ್ಕೂ ಹೆಚ್ಚು ವನ್ಯಜೀವಿ ಅಭಯಾರಣ್ಯಗಳನ್ನು ಒಳಗೊಂಡಂತೆ 1,000 ಕ್ಕೂ ಹೆಚ್ಚು ಸಂರಕ್ಷಿತ ಪ್ರದೇಶಗಳನ್ನು ಹೊಂದಿದೆ.

**ಪ್ರಮುಖ ಸಂರಕ್ಷಣಾ ಕಾರ್ಯಕ್ರಮಗಳು:** ಪ್ರಾಜೆಕ್ಟ್ ಟೈಗರ್, ಪ್ರಾಜೆಕ್ಟ್ ಎಲಿಫೆಂಟ್ ಮತ್ತು ಇನ್ನಷ್ಟು

★ ಹುಲಿ ಸಂರಕ್ಷಿತ ಪ್ರದೇಶಗಳ ಮೂಲಕ ಹುಲಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ಪ್ರಾಜೆಕ್ಟ್ ಟೈಗರ್ ರಕ್ಷಿಸುತ್ತದೆ.

★ ಪ್ರಾಜೆಕ್ಟ್ ಎಲಿಫೆಂಟ್ ಆನೆ ಕಾರಿಡಾರ್‌ಗಳು, ಸಂಘರ್ಷ ತಗ್ಗಿಸುವಿಕೆ ಮತ್ತು ರಕ್ಷಣೆಯ ಮೇಲೆ ಕೇಂದ್ರೀಕರಿಸುತ್ತದೆ.

★ ಹಿಮ ಚಿರತೆಗಳು, ಬಸ್ಟರ್ಡ್‌ಗಳು, ಮೊಸಳೆಗಳು ಮತ್ತು ಇತರವುಗಳ ಮೇಲೆ ಹಲವಾರು ಜಾತಿಗಳ ಚೇತರಿಕೆ ಕಾರ್ಯಕ್ರಮಗಳು ಕಾರ್ಯನಿರ್ವಹಿಸುತ್ತವೆ.

ಈ ಪ್ರಯತ್ನಗಳು 2026 ರ ವಿಶ್ವ ವನ್ಯಜೀವಿ ದಿನದ ಉತ್ಸಾಹಕ್ಕೆ ನೇರವಾಗಿ ಅನುಗುಣವಾಗಿವೆ.

**ಸ್ಥಳೀಯ ಸಮುದಾಯಗಳು, ಅರಣ್ಯ ರಕ್ಷಕರು ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ:** ಪ್ರತಿಯೊಂದು ಯಶಸ್ವಿ ಸಂರಕ್ಷಣಾ ಕಥೆಯ ಹಿಂದೆ, ಕಷ್ಟಕರವಾದ ಭೂಪ್ರದೇಶದಲ್ಲಿ ಗಸ್ತು ತಿರುಗುವ ಅರಣ್ಯ ಸಿಬ್ಬಂದಿ, ಸುಸ್ಥಿರ ಸಂಪನ್ಮೂಲ ಬಳಕೆಗೆ ಒಪ್ಪುವ ಗ್ರಾಮಸ್ಥರು ಮತ್ತು ಜಾಗೃತಿ ಕೆಲಸ ಮತ್ತು ವೈಜ್ಞಾನಿಕ ಮೇಲ್ವಿಚಾರಣೆಯನ್ನು ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳು ಇವೆ.

**ವನ್ಯಜೀವಿ ಅಭಯಾರಣ್ಯ ಎಂದರೇನು?:** ವನ್ಯಜೀವಿ ಅಭಯಾರಣ್ಯವು ಸಂರಕ್ಷಿತ ಪ್ರದೇಶವಾಗಿದ್ದು, ಅಲ್ಲಿ ಕಾಡು ಪ್ರಾಣಿಗಳು ಮತ್ತು ಸಸ್ಯಗಳಿಗೆ ವಾಸಿಸಲು ಮತ್ತು ಸಂತಾನೋತ್ಪತ್ತಿ ಮಾಡಲು ಸುರಕ್ಷಿತ ಸ್ಥಳವನ್ನು ನೀಡಲಾಗುತ್ತದೆ. ಮಾನವ ಚಟುವಟಿಕೆಗಳನ್ನು ನಿಯಂತ್ರಿಸಲಾಗುತ್ತದೆ, ಆದರೆ ರಾಷ್ಟ್ರೀಯ ಉದ್ಯಾನವನಗಳಂತೆ ಯಾವಾಗಲೂ ಕಟ್ಟುನಿಟ್ಟಾಗಿರುವುದಿಲ್ಲ. ಕನಿಷ್ಠ ಅಡಚಣೆಯೊಂದಿಗೆ ಸಂರಕ್ಷಣೆ ಮುಖ್ಯ ಗುರಿಯಾಗಿದೆ.

**ವನ್ಯಜೀವಿ ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನದ ನಡುವಿನ ವ್ಯತ್ಯಾಸ**

★ ರಾಷ್ಟ್ರೀಯ ಉದ್ಯಾನವನಗಳಲ್ಲಿ, ರಕ್ಷಣೆ ಸಾಮಾನ್ಯವಾಗಿ ಕಠಿಣವಾಗಿರುತ್ತದೆ ಮತ್ತು ಮಾನವ ಬಳಕೆ ಹೆಚ್ಚು ನಿರ್ಬಂಧಿತವಾಗಿರುತ್ತದೆ.

★ ಅಭಯಾರಣ್ಯಗಳಲ್ಲಿ, ನಿಯಮಗಳಿಗೆ ಅನುಗುಣವಾಗಿ ಮೇಯಿಸುವಿಕೆ ಅಥವಾ ಪ್ರವಾಸೋದ್ಯಮದಂತಹ ಕೆಲವು ನಿಯಂತ್ರಿತ ಮಾನವ ಚಟುವಟಿಕೆಗಳನ್ನು ಅನುಮತಿಸಬಹುದು.

**ಭಾರತದಲ್ಲಿ ಎಷ್ಟು ವನ್ಯಜೀವಿ ಅಭಯಾರಣ್ಯಗಳಿವೆ?**

ಭಾರತೀಯ ವನ್ಯಜೀವಿ ಸಂಸ್ಥೆಯ ನವೀಕರಿಸಿದ ಮಾಹಿತಿಯ ಪ್ರಕಾರ, ಭಾರತವು ಈಗ ಸುಮಾರು 574 ವನ್ಯಜೀವಿ ಅಭಯಾರಣ್ಯಗಳನ್ನು ಹೊಂದಿದ್ದು , 1.27 ಲಕ್ಷ ಕಿ.ಮೀ ಗಿಂತ ಹೆಚ್ಚು ವಿಸ್ತೀರ್ಣವನ್ನು ಹೊಂದಿದೆ.

**ಭಾರತದ ಪ್ರಮುಖ ವನ್ಯಜೀವಿ ಅಭಯಾರಣ್ಯಗಳು ವಿದ್ಯಾರ್ಥಿಗಳು ನೆನಪಿನಲ್ಲಿಟ್ಟುಕೊಳ್ಳಬೇಕಾದ ಕೆಲವು ಪ್ರಮುಖ ಪವಿತ್ರ ಸ್ಥಳಗಳು:**

★ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ ಮತ್ತು ಸುತ್ತಮುತ್ತಲಿನ ಅಭಯಾರಣ್ಯಗಳು (ಉತ್ತರಾಖಂಡ್) – ಹುಲಿಗಳು ಮತ್ತು ಆನೆಗಳಿಗೆ ಹೆಸರುವಾಸಿಯಾಗಿದೆ.

★ ಪೆರಿಯಾರ್ ವನ್ಯಜೀವಿ ಅಭಯಾರಣ್ಯ (ಕೇರಳ) – ಆನೆಗಳು, ಹುಲಿಗಳು, ಶ್ರೀಮಂತ ಪಕ್ಷಿ ಸಂಕುಲ.

★ ಗಿರ್ ವನ್ಯಜೀವಿ ಅಭಯಾರಣ್ಯ (ಗುಜರಾತ್) – ಏಷ್ಯಾಟಿಕ್ ಸಿಂಹಗಳ ನೆಲೆ

★ ಕನ್ಹಾ ಮತ್ತು ಬಾಂಧವಗಢ ಹುಲಿ ಭೂದೃಶ್ಯಗಳು (ಮಧ್ಯಪ್ರದೇಶ) – ದಟ್ಟವಾದ ಕಾಡುಗಳು, ದೊಡ್ಡ ಬೆಕ್ಕುಗಳು

★ ಮಾನಸ್ ವನ್ಯಜೀವಿ ಅಭಯಾರಣ್ಯ (ಅಸ್ಸಾಂ) – ಯುನೆಸ್ಕೋ ವಿಶ್ವ ಪರಂಪರೆಯ ತಾಣವೂ ಆಗಿದೆ.

★ ದಾಂಡೇಲಿ ಮತ್ತು ಭೀಮಗಡ (ಕರ್ನಾಟಕ) ನಿತ್ಯಹರಿದ್ವರ್ಣ ಕಾಡುಗಳು ಮತ್ತು ಹಾರ್ನ್‌ಬಿಲ್‌ಗಳು

★ ನಾಗರಹೊಳೆ (ಕರ್ನಾಟಕ) ಮತ್ತು ವಯನಾಡು ಪಟ್ಟಿ (ಕೇರಳ) – ಆನೆ ಮತ್ತು ಹುಲಿ ಭೂದೃಶ್ಯ

★ ಮರುಭೂಮಿ ರಾಷ್ಟ್ರೀಯ ಉದ್ಯಾನವನಪಕ್ಕದ ಅಭಯಾರಣ್ಯಗಳು (ರಾಜಸ್ಥಾನ) ಗ್ರೇಟ್ ಇಂಡಿಯನ್ ಬಸ್ಟರ್ಡ್ ಆವಾಸಸ್ಥಾನ


---

# ಪುನರ್ಜನ್ಮ ಪಡೆದ ಒಂದು ಗೊಂಡಾರಣ್ಯ!

> ಆಗುಂಬೆಯ ಸುತ್ತಲಿನ ದಟ್ಟ ಅರಣ್ಯವನ್ನು ನಾಶ ಮಾಡಿದರೆ, ಮುಂದಿನ ದಶಕಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಪರಿಸರದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರ ಬಹುದು ಎಂಬ ವಿಚಾರದ ಸ್ಥೂಲ ಅರಿವಿದ್ದರೂ, ಅಲ್ಲಿನ ಅರಣ್ಯ ನಾಶಕ್ಕೆ ಪ್ರಬಲವಾದ ನೆಪಗಳನ್ನು ಮುಂದೊಡ್ಡಿ, ಕೋಟಿಗಟ್ಟಲೆ ಅಂದಾಜು ವೆಚ್ಚದ ಕಾಮಗಾರಿಗಳನ್ನು ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ.

ಇಂದಿನ ಆಧುನಿಕ ಯುಗದಲ್ಲಿ, ಅರಣ್ಯಗಳ ವಿಚಾರಕ್ಕೆ ಬಂದಾಗ, ಎಲ್ಲಿ ಕಂಡರೂ ಅರಣ್ಯ ನಾಶ, ಮರಗಳ ನಾಶ, ನೆಡುತೋಪು ನಾಶಗಳೇ ಕಾಣಿಸುತ್ತಿವೆ. ದಟ್ಟವಾದ ಅರಣ್ಯವನ್ನು ತೆಳುಮಾಡುವುದು, ತೆಳುವಾದ ಅರಣ್ಯವನ್ನು ಬೋಳು ಮಾಡುವುದು, ಹೊಲ ಗದ್ದೆಗಳ ಅಂಚಿನಲ್ಲಿರುವ ಅರಣ್ಯ ಪ್ರದೇಶವನ್ನು ಸಾಗುವಳಿಗೆ ಒಳಪಡಿಸುವ ಮೂಲಕ ಅಲ್ಲಿನ ಜೀವ ವೈವಿಧ್ಯವನ್ನು ನಾಶಮಾಡುವುದು ಮೊದಲಾದ ಚಟುವಟಿಕೆಗಳು ಬಹಳ ಮಾಮೂಲು ಎನಿಸುವ ಸುದ್ದಿಗಳಾಗಿವೆ.

ನಮ್ಮ ರಾಜ್ಯದ ಸುದ್ದಿಗಳನ್ನೇ ಗಮನಿಸಿದರೆ, ಕೆರೆಗಳ ಸುತ್ತಲಿನ ಬಫರ್ ಜೋನ್ ಅನ್ನು ಸರಕಾರದ ಇಲಾಖೆಗಳೇ ಕಡಿಮೆ ಮಾಡಿ, ಆ ಮೂಲಕ ಕೆರೆಗಳ ಅಂಚಿನಲ್ಲಿ ಬೆಳೆದಿರುವ ಗಿಡ ಮರಗಳು, ಹುಲ್ಲು ಸಸ್ಯಗಳು, ಕುರುಚಲು ಕಾಡನ್ನು ನಾಶ ಮಾಡಲು ಅನುಮತಿ ನೀಡುವ ಕೆಲಸ ನಡೆಯುತ್ತಿದೆ.



ಅತ್ತ, ಪರಿಸರ ಸೂಕ್ಷ್ಮ ಜಾಗ ಎನಿಸಿರುವ, ವಿಶ್ವಪರಂಪರೆಯ ತಾಣದ ಭಾಗವಾಗಿರುವ ಆಗುಂಬೆಯ ಸುತ್ತಲಿರುವ ನಿತ್ಯಹರಿದ್ವರ್ಣ ಕಾಡನ್ನು ನಾಶಮಾಡಲು ಸುರಂಗ ತೋಡುವ ಪ್ರಸ್ತಾಪವನ್ನು ಪಕ್ಷಭೇದವಿಲ್ಲದೇ ರಾಜಕೀಯ ನಾಯಕರು ಬೆಂಬಲಿಸುತ್ತಿರುವಂತೆ ಕಾಣಿಸುತ್ತಿದೆ.

ಆಗುಂಬೆಯ ಸುತ್ತಲಿನ ದಟ್ಟ ಅರಣ್ಯವನ್ನು ನಾಶ ಮಾಡಿದರೆ, ಮುಂದಿನ ದಶಕಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಪರಿಸರದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಬಹುದು ಎಂಬ ವಿಚಾರದ ಸ್ಥೂಲ ಅರಿವಿದ್ದರೂ, ಅಲ್ಲಿನ ಅರಣ್ಯ ನಾಶಕ್ಕೆ ಪ್ರಬಲವಾದ ನೆಪಗಳನ್ನು ಮುಂದೊಡ್ಡಿ, ಕೋಟಿಗಟ್ಟಲೆ ಅಂದಾಜು ವೆಚ್ಚದ ಕಾಮಗಾರಿಗಳನ್ನು ಜಾರಿಗೆ ತರುವ ಪ್ರಯತ್ನ ನಡೆಯುತ್ತಿದೆ.

ಈಗ ನಮ್ಮಲ್ಲಿ ಉಳಿದುಕೊಂಡಿರುವ ಅರಣ್ಯ, ಹುಲ್ಲುಗಾವಲು, ಕುರುಚಲು ಕಾಡು, ಬೆಟ್ಟಗುಡ್ಡಗಳ ಕಲ್ಲುಬಂಡೆಗಳ ನಡುವಿನ ಪರಿಸರ ಇವುಗಳನ್ನು ರಕ್ಷಿಸುವುದರ ಕುರಿತು ಪಠ್ಯ ಪುಸ್ತಕಗಳಲ್ಲಿ ಪಾಠಗಳನ್ನು ಸೇರಿಸುವ ಕೆಲಸವಾಗುತ್ತಿರುವುದು ನಿಜ; ಆದರೆ, ನಿಜಜೀವನದಲ್ಲಿ ನಮ್ಮ ಸುತ್ತಲೂ ಇರುವ ಹಸಿರು ಕವಚ, ಗಿಡ, ಮರ, ಬಳ್ಳಿ, ಕುರುಚಲು ಕಾಡು, ಜೀವವೈವಿಧ್ಯಕ್ಕೆ ಆಸರೆ ನೀಡುವ ತಾಣಗಳ ನಾಶವೇ ಢಾಳಾಗಿ ಕಾಣಿಸುತ್ತಿದೆ.

ಇಂಥ ಸನ್ನಿವೇಶದಲ್ಲಿರುವ ನಾವು, ಒಂದು ಗೊಂಡಾರಣ್ಯಕ್ಕೆ ಮರುಹುಟ್ಟು ನೀಡಿದ ಅಭೂತಪೂರ್ವ ಪ್ರಕ್ರಿಯೆಯನ್ನು ಪುಸ್ತಕಗಳಲ್ಲಿ, ಬರಹಗಳಲ್ಲಿ ಓದುವ ಮೂಲಕವಾದರೂ, ತುಸು ಸಮಾಧಾನ ಹೊಂದಬೇಕು ಮತ್ತು ಕೆಲವು ಬಾರಿ ಅಂಥ ಪುನರ್ಜನ್ಮ ಪಡೆದ ಗೊಂಡಾರಣ್ಯಗಳು ನಮ್ಮ ನಾಡಿನ ಅರಣ್ಯಗಳ ರಕ್ಷಣೆಗೆ ಸ್ಫೂರ್ತಿ ತುಂಬಬಲ್ಲವು ಎಂದು ಸದಾಶಯವನ್ನೂ (ಇದು ಅಲ್ಪ ತೃಪ್ತಿ ಎನಿಸಿದರೂ) ಇಟ್ಟುಕೊಳ್ಳಬಹುದು!

ದೂರದ ಆಸ್ಟ್ರೇಲಿಯಾದಲ್ಲಿ ಒಂದು ಗೊಂಡಾರಣ್ಯಕ್ಕೆ ಪುನರ್ಜನ್ಮ ನೀಡಲಾಗಿದೆ. ಪೂರ್ತಿ ನಾಶವಾಗಿದ್ದ ಅಂಥದೊಂದು ಅರಣ್ಯಕ್ಕೆ ಪುನರ್ಜನ್ಮ ನೀಡಿದ್ದು ಒಬ್ಬ ಮಹಿಳೆ ಎಂಬ ವಿಚಾರವೂ ಬೆರಗನ್ನು ಮೂಡಿಸುತ್ತದೆ. ಬೇರೆ ಬೇರೆ ಉದ್ದೇಶಗಳಿಗೆ, ಕೃಷಿಯ ಪ್ರಯತ್ನಗಳಿಗೆ ಒಳಗಾಗಿದ್ದ ಕಾಡಿನ ಭಾಗವು, ಸಂಪೂರ್ಣ ಬರಡು ಸ್ವರೂಪವನ್ನು ಪಡೆದಿದ್ದ ಸಂದರ್ಭದಲ್ಲಿ, ಆ ವಿಶಾಲ ಜಾಗವನ್ನು ಖರೀದಿಸಿ, ಅಲ್ಲಿ ಮೊದಲಿದ್ದಂತೆ ಕಾಡನ್ನು ಬೆಳೆಸುವ ಪ್ರಯತ್ನ ಮಾಡಿದಾಕೆ, ಜರ್ಮೇನ್ ಗ್ರಿಯರ್ (ಜನನ 1939) ಎಂಬ ಮಹಿಳೆ.

ಈಕೆ ಜನಿಸಿದ್ದು ಆಸ್ಟ್ರೇಲಿಯಾದಲ್ಲಿ, ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ 1967ರಲ್ಲಿ ಪಿಎಚ್‌ಡಿ ಮಾಡಿದ ನಂತರ, ವಾರ್ವಿಕ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯ ಮತ್ತು ತೌಲನಿಕ ಅಧ್ಯಯನದಲ್ಲಿ ಅಧ್ಯಾಪನ ಮಾಡುತ್ತಿದ್ದವಳು.

ಸ್ತ್ರೀ ವಾದವನ್ನು ಬೇರೊಂದು ಆಯಾಮದಲ್ಲಿ ಮುಂಚೂಣಿಗೆ ತಂದಿದ್ದು ಈಕೆಯ ಆರಂಭಿಕ ಸಾಹಸಗಳಲ್ಲಿ ಒಂದು. 1970ರ ದಶಕದಲ್ಲಿ ತಾನು ಪ್ರಕಟಿಸಿದ ಫಿಮೇಲ್ ಎನುಚ್ ಪುಸ್ತಕದಿಂದಾಗಿ ಹೆಸರುವಾಸಿಯಾದಾಕೆ. ಆನಂತರ ಕೆಲವು ಸ್ತ್ರೀ ಕೇಂದ್ರಿತ ಕೃತಿಗಳನ್ನು ಪ್ರಕಟಿಸಿದ್ದುಂಟು.

2004ರಲ್ಲಿ ಷೇಕ್ಸ್ ಪಿಯರ್ಸ್ ವೈಫ್ ಎಂಬ ವಿನೂತನ ಗ್ರಂಥದಲ್ಲಿ ಆ ಪ್ರಸಿದ್ಧ ನಾಟಕ ಕಾರನ ಪತ್ನಿಯ ದಿನಚರಿ ಹೇಗಿರಬಹುದು ಎಂಬ ಸಂಶೋಧನಾತ್ಮಕ ಚಿಂತನೆಯನ್ನು ತೋಡಿಕೊಂಡಿದ್ದು ವಿಮರ್ಶಾ ವಲಯದ ಗಮನ ಸೆಳೆದಿತ್ತು. ಅಂಥ ಚಿಂತಕರ, ಬರಹಗಾರರ ವಲಯದಲ್ಲಿ ಪ್ರಸಿದ್ಧಿ ಪಡೆದಿದ್ದ ಈ ದಿಟ್ಟ ಲೇಖಕಿ, ಒಂದು ದಿನ ತನ್ನ ಬದುಕಿನ ದಿಕ್ಕನ್ನೇ ಬದಲಿಸುವ ನಿರ್ಧಾರ ತೆಗೆದುಕೊಂಡಳು!

ತಾನು ಜನಿಸಿದ ದೇಶಕ್ಕೆ ವಾಪಸಾಗಿ, ಪರಿಸರ ಚಿಂತನೆ ಮತ್ತು ಪರಿಸರ ರಕ್ಷಣೆಯಲ್ಲಿ ಆಕೆ ತೊಡಗಿಕೊಂಡಿದ್ದೇ ಒಂದು ವಿಸ್ಮಯ. ಬರವಣಿಗೆ, ಸ್ತ್ರೀ ವಾದ ಮತ್ತು ಹೋರಾಟದಲ್ಲಿ ತೊಡಗಿಕೊಂಡಿದ್ದ ಜರ್ಮೇನ್ ಗ್ರಿಯರ್, ವಿದೇಶವನ್ನು ತೊರೆದು, ಆಸ್ಟ್ರೇಲಿಯಾ ದೇಶಕ್ಕೆ ವಾಪಸಾಗಿ, ತನ್ನ 62ನೆಯ ವಯಸ್ಸಿನಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್ ಪ್ರದೇಶದ ಮಳೆಕಾಡಿನ ನಡುವೆ ಪಾಳು ಬಿದ್ದಿದ್ದ 60 ಹೆಕ್ಟೇರ್ ಜಮೀನನ್ನು ಕೊಂಡು, ಆ ಜಾಗವು ಪುನಃ ತನ್ನ ಮೂಲಸ್ವರೂಪವಾದ ಮಳೆಕಾಡಿನ ಸ್ವರೂಪವನ್ನು ಪಡೆದುಕೊಳ್ಳಲಿ ಎಂದು ಪ್ರಾಮಾಣಿಕ ಪ್ರಯತ್ನ ನಡೆಸಿದಳು.

ತನ್ನ ಜೀವಿತಾವಧಿಯ ಸಂಪಾದನೆಯನ್ನು ಬಳಸಿ, ಆ ಪಾಳುಜಾಗವನ್ನು ಖರೀದಿಸಿದಳು. ಲಂಟಾನಾ ಮತ್ತಿತರ ಕಳೆಗಳು ದಂಡಿಯಾಗಿ ಬೆಳೆದುಕೊಂಡಿದ್ದ ಆ ಜಾಗವು ತನ್ನ ಮೂಲ ರೂಪವಾದ ಮಳೆಕಾಡು ಅಥವಾ ಪುರಾತನ ಗೊಂಡ್ವಾನಾ ರೂಪವನ್ನು ತಳೆಯಲಿ ಎಂದು ಆಶಿಸಿದ ಆಕೆಯ ಕನಸನ್ನು ಕಂಡು ಆಕೆಯ ಕೆಲವು ಹಿತೈಷಿಗಳು ಕನಿಕರಿಸಿದ್ದೂ ಉಂಟು.

ಇನ್ನು ಕೆಲವರು ಪ್ರೋತ್ಸಾಹ ರೂಪದಲ್ಲಿ ಬೆನ್ನು ತಟ್ಟಿದ್ದೂ ಉಂಟು. ಇದೊಂದು ದುಃಸಾಹಸ ಎಂದು ಬೆದರಿಸಿದವರೂ ಇದ್ದರು. ಬಾಳೆ ಮತ್ತು ಇತರ ಬೆಳೆಗಳ ಕೃಷಿಗಾಗಿ ಆ ಜಾಗದಲ್ಲಿ ಅಪಾರ ಪ್ರಮಾಣದ ಗೊಬ್ಬರ ಮತ್ತು ಕೀಟನಾಶಕಗಳನ್ನು ಸುರಿಯಲಾಗಿತ್ತು; ಹಲವು ವರ್ಷಗಳ ನಂತರ ಭೂಮಿ ನಂಜಾಗಿ, ಇಳುವರಿ ಕಡಿಮೆಯಾದಾಗ, ಆ ಜಾಗವನ್ನು ಪಾಳು ಬಿಟ್ಟಿದ್ದರು.


ಅದೊಂದು ರಾಸಾಯನಿಕ ಮರುಭೂಮಿಯ ರೀತಿ ಇತ್ತು. ಅಲ್ಲಿ ಬೆಳೆದಿದ್ದ ಕಳೆಗಳನ್ನು ಸವರಿ, ಕೆಲವು ಸಸ್ಯಶಾಸ್ತ್ರಜ್ಞರ ಸಲಹೆಯ ಮೇರೆಗೆ ಸ್ಥಳೀಯ ಸಸ್ಯಗಳನ್ನು ನೆಟ್ಟು ಬೆಳೆಸಲು ಆಕೆ ಗಂಭೀರ ಯತ್ನ ನಡೆಸಿದಳು. ಅಂಥ ಪ್ರದೇಶವನ್ನು ಅದರಷ್ಟಕ್ಕೇ ಬಿಟ್ಟುಬಿಟ್ಟರೆ, ಪುನಃ ಕಾಡು ತನ್ನ ಮೂಲರೂಪವನ್ನು ಕಂಡುಕೊಳ್ಳುತ್ತದೆ ಎಂದು ಯಾರೋ ನೀಡಿದ ಸಲಹೆಯನ್ನು ಕೇಳಿ ಅಂಥ ಪ್ರಯತ್ನವನ್ನು ಸಹಾ ಮಾಡಿದಳು.

ಪಾಳು ಬಿದ್ದಿದ್ದ ಆ ಜಾಗವನ್ನು ಹಾಗೆಯೇ ಬಿಟ್ಟಾಗ, ಒಂದು ದಶಕದ ನಂತರ, ಅಲ್ಲಿ ಹಸಿರು ಚಿಗುರೊಡೆಯಿತು! ಮಳೆಕಾಡಿನಲ್ಲಿ ಸಹಜವಾಗಿ ಕಂಡುಬರುವ ಹಲವು ಸಸ್ಯಗಳು ಪುನರ್ಜನ್ಮ ಪಡೆದುಕೊಂಡವು! ಜರ್ಮೇನ್ ಗ್ರಿಯರ್ ಸಹೋದರಿ ಸಸ್ಯಶಾಸ್ತ್ರಜ್ಞೆ, ಆಕೆಯ ಸಹಾಯವೂ ದೊರಕಿತು ಮತ್ತು ಸ್ಥಳೀಯ ಸಸ್ಯಗಳ ಮತ್ತು ಅವಕ್ಕೆ ಸಂಬಂಧಿಸಿದ ಇತಿಹಾಸವನ್ನು ತಿಳಿಯಲು ಅನುಕೂಲವಾಯಿತು.




60 ಹೆಕ್ಟೇರ್ ಪ್ರದೇಶದಲ್ಲಿ ನಿಧಾನವಾಗಿ ಹಸಿರು ತುಂಬತೊಡಗಿತು. ಆಗ ಒಂದು ಸಣ್ಣ ಪವಾಡವೂ ನಡೆಯಿತು! ಆ ಸುತ್ತಮುತ್ತಲಿರುವ ಮಳೆಕಾಡಿನಲ್ಲಿ ತೊಂದರೆಗೊಳಗಾದ ಪ್ರಾಣಿ–ಪಕ್ಷಿಗಳು ಈಕೆಯ ಸುರಕ್ಷಿತ ಪ್ರದೇಶಕ್ಕೆ ಬಂದು ನೆಲೆಕಂಡುಕೊಳ್ಳಲು ಆರಂಭಿಸಿದವು.

ಹೆಬ್ಬಾವುಗಳು, ಕಾಡುನಾಯಿ ಗಳು, ದೊಡ್ಡ ಜಾತಿಯ ಉಡಗಳು, ವಿವಿಧ ಹಕ್ಕಿಗಳು, ಕೀಟಗಳು, ಮರಕಪ್ಪೆಗಳು ಇಂಥ ಹಲವು ಜೀವಿಗಳು ಇವರ ಮಳೆಕಾಡಿನಲ್ಲಿ ತಮ್ಮ ಚಟುವಟಿಕೆಗಳನ್ನು ಆರಂಭಿಸಿದವು. ವಾಸ್ತವವೆಂದರೆ, ಈ 60 ಹೆಕ್ಟೇರಿನ ಸುತ್ತಮುತ್ತಲೂ ಹರಡಿ ಕೊಂಡಿರುವುದು ಸಹಾ ಆಸ್ಟ್ರೇಲಿಯಾದ ಮಳೆಕಾಡುಗಳ ಪ್ರದೇಶವೇ.



ಆದರೆ, ಆ ಸುತ್ತಮುತ್ತಲಿನ ಸಾವಿರಾರು ಹೆಕ್ಟೇರ್ ಪ್ರದೇಶವನ್ನು ಆಧುನಿಕ ಮಾನವನು ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದ್ದರಿಂದಾಗಿ, ಅಲ್ಲೆಲ್ಲಾ ಪರಿಸರ ನಲುಗಿತ್ತು. ಕಾಡಿನ ನಡುವೆ ದಿನ ಕಳೆಯಲು ಬನ್ನಿ ಎಂದು ಪ್ರಚಾರ ಮಾಡುತ್ತಿದ್ದ ಅಲ್ಲಿನ ಹಲವು ರೆಸಾರ್ಟ್‌ಗಳನ್ನು ನಡೆಸುವವರು ಆರ್ಥಿಕ ಚಟುವಟಿಕೆಗೆ ಮತ್ತು ಬೇಗನೆ ಲಾಭವನ್ನು ತರಲು ಪೂರಕವಾದ ಕ್ರಮಗಳನ್ನು ಮಾತ್ರ ಪ್ರೋತ್ಸಾಹಿಸುತ್ತಿದ್ದರು.

ಅಲ್ಲಿದ್ದ ದಟ್ಟವಾದ ಕಾಡನ್ನು ಸವರಿ, ಅಲ್ಲಿ ಬಾಳೆ ಮೊದಲಾದ ಆರ್ಥಿಕ ಬೆಳೆಗಳನ್ನು ಬೆಳೆದಿದ್ದರು. ಆರ್ಥಿಕ ಲಾಭ ಮತ್ತು ತ್ವರಿತ ಬೆಳೆ ಬರಲು ಅಲ್ಲಿನ ನೆಲಕ್ಕೆ ನಾನಾ ರೀತಿಯ ವಿಷವಸ್ತುಗಳನ್ನು ಮತ್ತು ಕಳೆನಾಶಕಗಳನ್ನು ಸುರಿದಿದ್ದರು. ಕಳೆ ಅಥವಾ ಇತರ ಸಸ್ಯಗಳನ್ನು ನಾಶಪಡಿಸಲು, ವಿಯೆಟ್ನಾಂನಲ್ಲಿ ಯುದ್ಧದ ಸಮಯದಲ್ಲಿ ಅಲ್ಲಿನ ದಟ್ಟ ಕಾಡುಗಳ ಮೇಲೆ ಸುರಿದಿದ್ದ ಘನಘೋರ ವಿಷವನ್ನು ಸಹಾ ಹಾಕಿ ಅಲ್ಲಿನ ನೆಲವನ್ನು ಹಾಳುಗೆಡವಿದ್ದರು.

ದೊಡ್ಡ ಗಾತ್ರದಲ್ಲಿ ಡೈರಿ ಫಾರ್ಮಿಂಗ್ ಮಾಡಿ, ಹಾಲು ಮತ್ತು ಇತರ ಉತ್ಪನ್ನಗಳನ್ನು ತಯಾರಿಸುವ ಭರದಲ್ಲಿ, ಪರಸರಕ್ಕೆ ಸಾಕಷ್ಟು ಧಕ್ಕೆ ತಂದಿದ್ದರು. ಇವೆಲ್ಲವೂ, ಆಸ್ಟ್ರೇಲಿಯಾದ ಬಿಳಿ ಜನರು ಅಥವಾ ಲೇಖಕಿಯ ಜನಾಂಗದವರು ತಮ್ಮ ವಸಾಹತುಶಾಹಿ ಧೋರಣೆಯಿಂದ ನಡೆಸಿದ ಅಚಾತುರ್ಯ ಅಥವಾ ಕುಕೃತ್ಯಗಳು!

ಕುಕೃತ್ಯ ಎಂಬ ಶಬ್ದ ಏಕೆಂದರೆ, ತನ್ನ ಕುಲದವರು ಸ್ಥಳೀಯ ಆದಿಮ ಜನಾಂಗದವರ ಮೇಲೆ ನಡೆಸಿದ ದಬ್ಬಾಳಿಕೆ ಮತ್ತು ದೌರ್ಜನ್ಯದ ಕುರಿತು ಲೇಖಕಿ ಜರ್ಮೇನ್ ಗ್ರಿಯರ್‌ಗೆ ಸಾಕಷ್ಟು ಪಶ್ಚಾತ್ತಾಪವಿದೆ. ಆ 60 ಹೆಕ್ಟೇರ್ ಪ್ರದೇಶದಲ್ಲಿ ಕಾಡು ಬೆಳೆಸಲು ಪಟ್ಟ ಸಾಹಸದ ಕುರಿತು ಆಕೆ ಬರೆದ ಪುಸ್ತಕ ವೈಟ್ ಬೀಚ್– ಇದರಲ್ಲಿ ಕಾಡು ಬೆಳೆಸುವ ಸಾಹಸದ ಜತೆಯಲ್ಲೇ, ಆ ಸುತ್ತಲಿನಲ್ಲಿದ್ದ ಆಸ್ಟ್ರೇಲಿಯಾದ ಆದಿಮ ಜನಾಂಗದ ಕುರಿತು ವಿವರಗಳಿವೆ.

19ನೆಯ ಮತ್ತು 20ನೆಯ ಶತಮಾನದ ಉದ್ದಕ್ಕೂ, ಸ್ಥಳೀಯ ಜನರನ್ನು ಬಿಳಿಜನರು ಹತ್ತಿಕ್ಕಿದ ಇತಿಹಾಸದ ತುಣುಕುಗಳನ್ನು ಲೇಖಕಿಯು ತನ್ನ ಪುಸ್ತಕದುದ್ದಕ್ಕೂ ಅಲ್ಲಲ್ಲಿ ನೀಡುತ್ತಾಳೆ. ಡೈರಿ ಫಾರಂನ ಹೊರಭಾಗದಲ್ಲಿ ದೊರೆಯುತ್ತಿದ್ದ ಹಾಲಿನ ಕೆನೆಯನ್ನು ಕದ್ದು ನೆಕ್ಕಲು ರಾತ್ರಿ ಹೊತ್ತು ಬರುತ್ತಿದ್ದ ಹಸಿದಿದ್ದ ಅನಕ್ಷರಸ್ಥ ಸ್ಥಳೀಯರನ್ನು ಅದು ಹೇಗೆ ವಿಷಭರಿತ ಕೆನೆಯನ್ನು ಬಳಸಿ ಕೊಂದರು ಎಂಬ ವಿವರ, ಕ್ಷುಲ್ಲಕ ಕಾರಣಕ್ಕಾಗಿ ಸ್ಥಳೀಯ ಜನರನ್ನು ಗುಂಡಿಟ್ಟು ಕೊಂದ ವಿವರಗಳು ಈ ಪುಸ್ತಕದಲ್ಲಿವೆ. ಆದಿಮ ಜನಾಂಗ ಬಳಸುತ್ತಿದ್ದುದು ಬಿಲ್ಲು, ಬಾಣ, ಈಟಿ ಮೊದಲಾದ ಆಯುಧಗಳನ್ನು; ಬಿಳಿಜನರ ಕೈಯಲ್ಲಿತ್ತು ಬಂದೂಕು!

ತಮಗೆ ಸೂಕ್ತ ಎನಿಸುವ ಕಾನೂನನ್ನು ಮಾಡಿಕೊಂಡು ಆದಿಮ ಜನರನ್ನು ಅವರು ಎರಡು ಶತಮಾನಗಳ ಕಾಲ ಬೇಟೆಯಾಡಿದರು. ಆಸ್ಟ್ರೇಲಿಯಾದ ಆದಿಮ ಜನರನ್ನು ಅಬಾರಿಜಿನಲ್ ಎನ್ನಲಾಗುತ್ತಿದ್ದು, ಅಲ್ಲಿನ ಪ್ರಾಣಿಗಳೊಂದಿಗೆ ಬದುಕಿಕೊಂಡಿದ್ದ ಅವರನ್ನು ನಾಮಾ ವಶೇಷ ಮಾಡಿ, ಬಿಳಿಜನರು ಅಲ್ಲಿ ನೆಲೆಯೂರಿದ ಇತಿಹಾಸದ ಕುರಿತು ಲೇಖಕಿಗೆ ಆಳವಾದ ಜ್ಞಾನವಿದ್ದು, ವೈಟ್ ಬೀಚ್ ಕೃತಿಯುದ್ದಕ್ಕೂ ಅದನ್ನು ಆಕೆ ಪ್ರಸ್ತಾಪಿಸುವುದು ಕುತೂಹಲ ಕಾರಿ.

ಅಂಥ ರಕ್ತಸಿಕ್ತ ಇತಿಹಾಸವನ್ನು ಪ್ರಸ್ತಾಪಿಸಲು ತನ್ನ ನೆಲದಲ್ಲಿ ಹೂತಿಟ್ಟುಕೊಂಡಿರುವ ಜಾಗವೊಂದನ್ನು ಖರೀದಿಸಿ, ಅಲ್ಲಿ ಪುನಃ ಗೊಂಡಾರಣ್ಯವನ್ನು ಬೆಳೆಸುವ ಪ್ರಯತ್ನ ಮಾಡಿರುವ ಲೇಖಕಿಯು, ಅಲ್ಲಿನ ಮೂಲನಿವಾಸಿಯು ಬಂದು ಈ ಜಾಗ ನಮ್ಮ ಕುಲಕ್ಕೆ ಸೇರಿದ್ದು, ನಮಗೆ ಬಿಟ್ಟುಕೊಡಿ ಎಂದು ಹಕ್ಕೊತ್ತಾಯ ಮಾಡಿದರೆ, ಆ ಜಾಗವನ್ನು ಅವರಿಗೆ ಬಿಟ್ಟು ಕೊಡಲು ತಾನು ತಯಾರಿದ್ದೇನೆ ಎಂದು ಒಂದೆಡೆ ಹೇಳಿಕೊಳ್ಳುತ್ತಾಳೆ.

60 ಹೆಕ್ಟೇರ್ ಜಾಗವನ್ನು ಲೇಖಕಿಯು ಹಣಕೊಟ್ಟು ಖರೀದಿಸಿದ್ದರೂ, ಅದರ ಒಡೆತನವನ್ನು ಆಕೆ ಇಟ್ಟುಕೊಳ್ಳಲು ಬಯಸಲಿಲ್ಲ, ಗೊಂಡ್ವಾನಾ ರೈನ್ ಫಾರೆಸ್ಟ್ ಎಂಬ ಟ್ರಸ್ಟ್ ರಚಿಸಿ, ಅದನ್ನು ಆಸ್ಟ್ರೇಲಿಯಾದ ಒಂದು ಲಾಭರಹಿತ ಟ್ರಸ್ಟ್ ಆಗಿಸಿ, ಆ ಮಳೆಕಾಡನ್ನು ಆ ಟ್ರಸ್ಟ್‌ಗೆ ವಹಿಸಿಕೊಟ್ಟಿದ್ದಾಳೆ.

ತನ್ನ 62ನೆಯ ವಯಸ್ಸಿನಲ್ಲಿ, ಆಸ್ಟ್ರೇಲಿಯಾದಲ್ಲಿ ಬರಡು ಭೂಮಿಯನ್ನು ಖರೀದಿಸಿ, ಗೊಂಡಾರಣ್ಯವನ್ನು ಮರುಬೆಳೆಸುವ ಆಕೆಯ ಪ್ರಯತ್ನ ಬಹು ವಿಶಿಷ್ಟ ಎಂಬುದರಲ್ಲಿ ಅನುಮಾನವಿಲ್ಲ. ಆಕೆಯು ತನ್ನ ಅನುಭವಗಳನ್ನು ನಿವೇದಿಸಿರುವ ಈ ಪುಸ್ತಕವನ್ನು ಓದಿದಾಗ, ಕಾಡಿನ ಕನಸು ಕಾಡುತ್ತದೆ, ಆದಿಮ ಜನರ ನೋವು ಮನತಟ್ಟುತ್ತದೆ. ಆಕೆ ಬೆಳೆಸಿದ ಅರಣ್ಯವು ಇಂದು ಜೀವವೈವಿಧ್ಯವನ್ನು ಪೋಷಿಸುವ ದಟ್ಟ ಕಾಡಿನ ರೀತಿ ಬೆಳೆದುಕೊಂಡಿದೆ; ಆಸ್ಟ್ರೇಲಿಯಾದಂಥ ಮುಂದುವರಿದ ದೇಶದಲ್ಲೂ, ಗೊಂಡಾರಣ್ಯವನ್ನು ಮತ್ತೆ ನಿರ್ಮಿಸಬಹುದು ಎಂದು ಆಕೆಯ ಸಾಹಸ ತೋರಿಸಿಕೊಟ್ಟಿದೆ.

ನಮ್ಮ ವಿಶ್ವದ ಕೆಲವು ಮುಂದುವರಿದ ದೇಶಗಳಲ್ಲಿ ಗೊಂಡಾರಣ್ಯಗಳನ್ನು ಕಾಪಿಟ್ಟುಕೊಳ್ಳಲು ಬಿಗಿಯಾದ ಕಾನೂನುಗಳನ್ನು ಮಾಡಿಕೊಂಡಿದ್ದಾರೆ. ನಮ್ಮ ದೇಶದಲ್ಲೂ ಹಲವು ಕಾನೂನುಗಳ ಮೂಲಕ ವನ್ಯಜೀವಿ ಮತ್ತು ಅರಣ್ಯಗಳನ್ನು ರಕ್ಷಿಸುವ ಪ್ರಯತ್ನಗಳು ನಡೆದಿವೆ.

ಆದರೆ, ಈಚಿನ ವರ್ಷಗಳಲ್ಲಿ, ಅಧಿಕಾರದಲ್ಲಿರುವವರೇ ಅಂಥ ಕಾನೂನುಗಳನ್ನು ದುರ್ಬಲ ಗೊಳಿಸುವ ಪ್ರಯತ್ನಗಳು ನಡೆಯುತ್ತಿವೆಯೇ ಎಂಬ ಸಂಶಯವೂ ಮೂಡುತ್ತಿದೆ. ವಿಶ್ವ ಪರಂಪರೆಯ ತಾಣ ಎನಿಸಿರುವ ಪಶ್ಚಿಮ ಘಟ್ಟಗಳ ಗರ್ಭದಲ್ಲಿರುವ ಆಗುಂಬೆಯ ಅರಣ್ಯದಲ್ಲಿ ಸುರಂಗ ತೋಡುವ ಪ್ರಯತ್ನವು ಇಂಥ ಸಂಶಯಕ್ಕೆ ಇಂಬುಕೊಡುತ್ತಿದೆ.

ಅಭಿವೃದ್ಧಿಗಾಗಿ ಕಾಡನ್ನು ನಾಶಮಾಡುವಷ್ಟು ಸಿರಿವಂತರಾಗಿ ನಾವು ಇಂದು, ಈ 21ನೆಯ ಶತಮಾನದಲ್ಲಿ, ಉಳಿದಿಲ್ಲ; 20ನೆಯ ಶತಮಾನದಲ್ಲಿ ಅಭಿವೃದ್ಧಿಗಾಗಿ ಪರಿಸರ ನಾಶವಾಗಿತ್ತು; ಆದರೆ, ಪರಿಸರ ಸಂಪತ್ತಿನ ದೃಷ್ಟಿಯಲ್ಲಿ ನಾವು ಈಗ ಬಡವರು!

ನಮ್ಮಲ್ಲಿ ಈಗ ಇರುವ ದಟ್ಟ ಅರಣ್ಯವನ್ನು ಪರಿಸರವನ್ನು, ಕಾಪಿಟ್ಟುಕೊಂಡು, ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಇಂದಿನ ಆಧುನಿಕ ಮಾನವನ ಕರ್ತವ್ಯವೇ ಸರಿ.

**– ಶಶಿಧರ ಹಾಲಾಡಿ**

### ದಿಟ್ಟ ಲೇಖಕಿ...

■ ತಾನು ಜನಿಸಿದ ದೇಶಕ್ಕೆ ವಾಪಸಾಗಿ, ಪರಿಸರ ಚಿಂತನೆ ಮತ್ತು ಪರಿಸರ ರಕ್ಷಣೆಯಲ್ಲಿ ಆಕೆ ತೊಡಗಿಕೊಂಡಿದ್ದೇ ಒಂದು ವಿಸ್ಮಯ.

■ ಬರವಣಿಗೆ, ಸ್ತ್ರೀ ವಾದ ಮತ್ತು ಹೋರಾಟದಲ್ಲಿ ತೊಡಗಿಕೊಂಡಿದ್ದ ಜರ್ಮೇನ್ ಗ್ರಿಯರ್, ವಿದೇಶವನ್ನು ತೊರೆದು, ಆಸ್ಟ್ರೇಲಿಯಾ ದೇಶಕ್ಕೆ ವಾಪಸಾಗಿ, ತನ್ನ 62ನೆಯ ವಯಸ್ಸಿನಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್ ಪ್ರದೇಶದ ಮಳೆಕಾಡಿನ ನಡುವೆ ಪಾಳು ಬಿದ್ದಿದ್ದ 60 ಹೆಕ್ಟೇರ್ ಜಮೀನನ್ನು ಕೊಂಡು, ಆ ಜಾಗವು ಪುನಃ ತನ್ನ ಮೂಲಸ್ವರೂಪವಾದ ಮಳೆಕಾಡಿನ ಸ್ವರೂಪವನ್ನು ಪಡೆದುಕೊಳ್ಳಲಿ ಎಂದು ಪ್ರಾಮಾಣಿಕ ಪ್ರಯತ್ನ ನಡೆಸಿದಳು.

■ ತನ್ನ ಜೀವಿತಾವಧಿಯ ಸಂಪಾದನೆಯನ್ನು ಬಳಸಿ, ಆ ಪಾಳುಜಾಗವನ್ನು ಖರೀದಿಸಿದಳು.

■ ಲಂಟಾನಾ ಮತ್ತಿತರ ಕಳೆಗಳು ದಂಡಿಯಾಗಿ ಬೆಳೆದುಕೊಂಡಿದ್ದ ಆ ಜಾಗವು ತನ್ನ ಮೂಲ ರೂಪವಾದ ಮಳೆಕಾಡು ಅಥವಾ ಪುರಾತನ ಗೊಂಡ್ವಾನಾ ರೂಪವನ್ನು ತಳೆಯಲಿ ಎಂದು ಆಶಿಸಿದ ಆಕೆಯ ಕನಸನ್ನು ಕಂಡು ಆಕೆಯ ಕೆಲವು ಹಿತೈಷಿಗಳು ಕನಿಕರಿಸಿದ್ದೂ ಉಂಟು.

■ ಇನ್ನು ಕೆಲವರು ಪ್ರೋತ್ಸಾಹ ರೂಪದಲ್ಲಿ ಬೆನ್ನು ತಟ್ಟಿದ್ದೂ ಉಂಟು.

■ ಇದೊಂದು ದುಃಸಾಹಸ ಎಂದು ಬೆದರಿಸಿದವರೂ ಇದ್ದರು.

■ ಬಾಳೆ ಮತ್ತು ಇತರ ಬೆಳೆಗಳ ಕೃಷಿಗಾಗಿ ಆ ಜಾಗದಲ್ಲಿ ಅಪಾರ ಪ್ರಮಾಣದ ಗೊಬ್ಬರ ಮತ್ತು ಕೀಟನಾಶಕಗಳನ್ನು ಸುರಿಯಲಾಗಿತ್ತು; ಹಲವು ವರ್ಷಗಳ ನಂತರ ಭೂಮಿ ನಂಜಾಗಿ, ಇಳುವರಿ ಕಡಿಮೆಯಾದಾಗ, ಆ ಜಾಗವನ್ನು ಪಾಳು ಬಿಟ್ಟಿದ್ದರು.

■ ಅದೊಂದು ರಾಸಾಯನಿಕ ಮರುಭೂಮಿಯ ರೀತಿ ಇತ್ತು. ಅಲ್ಲಿ ಬೆಳೆದಿದ್ದ ಕಳೆಗಳನ್ನು ಸವರಿ, ಕೆಲವು ಸಸ್ಯಶಾಸ್ತ್ರಜ್ಞರ ಸಲಹೆಯ ಮೇರೆಗೆ ಸ್ಥಳೀಯ ಸಸ್ಯಗಳನ್ನು ನೆಟ್ಟು ಬೆಳೆಸಲು ಆಕೆ ಗಂಭೀರ ಯತ್ನ ನಡೆಸಿದಳು.

■ ಅಂಥ ಪ್ರದೇಶವನ್ನು ಅದರಷ್ಟಕ್ಕೇ ಬಿಟ್ಟುಬಿಟ್ಟರೆ, ಪುನಃ ಕಾಡು ತನ್ನ ಮೂಲರೂಪವನ್ನು ಕಂಡುಕೊಳ್ಳುತ್ತದೆ ಎಂದು ಯಾರೋ ನೀಡಿದ ಸಲಹೆಯನ್ನು ಕೇಳಿ ಅಂಥ ಪ್ರಯತ್ನವನ್ನು ಸಹಾ ಮಾಡಿದಳು.

# ಗ್ರಾಮಸ್ಥರು ಕೈಜೋಡಿಸಿದರೆ ಶಾಲೆಗಳ ಸಮಗ್ರ ಅಭಿವೃದ್ಧಿ

## ದೇವಾಲಯಗಳ ನಿರ್ಮಾಣಕ್ಕೆ ಒತ್ತು ನೀಡುವಂತೆ ಸರ್ಕಾರಿ ಶಾಲೆಗಳಿಗೂ ಸಹಕರಿಸಿ: ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ ಎಂ.ಬಿ.ಚನ್ನಕೇಶವ

• ಪ್ರಜೋದಯ ವರದಿ

**ಅರಕಲಗೂಡು:** ಗ್ರಾಮಗಳಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಒತ್ತು ನೀಡುವಂತೆ ಶಾಲೆಯ ಸಮಗ್ರ ಅಭಿವೃದ್ಧಿಗೂ ಗ್ರಾಮಸ್ಥರು ಕೈ ಜೋಡಿಸಿದಾಗ ಮಾತ್ರ ಸರ್ಕಾರಿ ಶಾಲೆಗಳ ಉಳಿವು ಸಾಧ್ಯ ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ ಎಂ.ಬಿ.ಚನ್ನಕೇಶವ ಅವರು ತಿಳಿಸಿದರು.

ತಾಲೂಕಿನ ಕೊರಟಿಕೆರೆ ಸರ್ಕಾರಿ ಶಾಲೆಯ ಶತಮಾನೋತ್ಸವ ಹಾಗೂ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕೊರಟಿಕೆರೆ ಗ್ರಾಮದ ಎಲ್ಲಾ ಸಮಾಜದವರು ಸೇರಿ ಶಾಲೆಯ ಶತಮಾನೋತ್ಸವ ಆಚರಣೆಯನ್ನು ಮಾಡುತ್ತಿರುವುದು ಇಡೀ ಸಮಾಜಕ್ಕೆ ದೊಡ್ಡ ಸಂದೇಶ ನೀಡಿದೆ. ಶಾಲೆಯಲ್ಲಿ ಓದುತ್ತಿರುವ ಮಕ್ಕಳು ಎಂದಿಗೂ ಕೂಡ ಇಂತಹ ಅವಿಸ್ಮರಣೀಯ ಕಾರ್ಯಕ್ರಮವನ್ನು ಇಡೀ ಜೀವಿತಾವಧಿಯಲ್ಲಿ ನೆನಪಿಸಿಕೊಳ್ಳುತ್ತಾರೆ ಎಂದು ಹೇಳಿದರು.

ರಾಜ್ಯ ಸರ್ಕಾರ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ ನಿಟ್ಟಿನಲ್ಲಿ ಸಕಲವನ್ನು ಕಲ್ಪಿಸುತ್ತಿದೆ. ಮಕ್ಕಳೇ ಶಾಲೆಗೆ ದಾಖಲಾಗದಿದ್ದರೇ ಆ ಸವಲತ್ತುಗಳನ್ನು ಬಳಸಿಕೊಳ್ಳುವುದು ಹೇಗೆ ಸಾಧ್ಯ. ಶಾಲಾ ಕಾರ್ಯಕ್ರಮಕ್ಕೆ ಇಡೀ ಗ್ರಾಮಸ್ಥರು ತನು, ಮನ ಧನವನ್ನು ಅರ್ಪಿಸಿ ಅಭೂತಪೂರ್ವ ಸಮಾರಂಭವನ್ನು ಆಯೋಜನೆ ಮಾಡಿದ್ದೀರಿ. ಅದೇ ನಿಟ್ಟಿನಲ್ಲಿ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಅತೀ ಹೆಚ್ಚು ಮಕ್ಕಳನ್ನು ಶಾಲೆಗೆ ಸೇರಿಸುವ ಮೂಲಕ ಇಡೀ ಜಿಲ್ಲೆಗೆ ದೊಡ್ಡ ಸಂದೇಶವನ್ನು ನೀಡಬೇಕೆಂದು ಕರೆ ನೀಡಿದರು.

ಶಿಕ್ಷಣ ಸಂಯೋಜನ ಯೋಗೇಶ್ ಅವರು ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿಯೂ ಕೂಡ ಆಂಗ್ಲ ಮಾದ್ಯಮ, ಕನ್ನಡ ಮಾದ್ಯಮ ಬೋಧನೆ ನಡೆಯುತ್ತಿದೆ. ಉಚಿತವಾಗಿ ದೊರೆಯುವ ಶಿಕ್ಷಣವನ್ನು ಪಡೆದುಕೊಳ್ಳಬೇಕು. ಸಾವಿರಾರು ರೂ.ಗಳನ್ನು ಸಾಲ ಮಾಡಿ ಖಾಸಗಿ ಶಾಲೆಗೆ ಕಟ್ಟುವ ಬದಲು ನಮ್ಮ ಸರ್ಕಾರಿ ಶಾಲೆ, ಕಾಲೇಜುಗಳಿಗೆ ಮಕ್ಕಳನ್ನು ಸೇರಿಸಿ ಎಂದು ಮನವಿ ಮಾಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವೆಂಟಕೇಶ್ ಗುರೂಜಿ ಅವರು, ನಾನು ಸೇರಿದಂತೆ ನಮ್ಮ ಪೂರ್ವಿಕರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಇದೇ ಶಾಲೆಯಲ್ಲಿ ಓದಿ ಉನ್ನತ ಹುದ್ದೆ ಪಡೆದು ನಿವೃತ್ತಿಯಾಗಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಬೋಧನೆ ದೊರೆಯುತ್ತದೆ. ನಾವೇ ಯಾವುದೋ ಆಮಿಷಗಳಿಗೆ ಒಳಗಾಗಿ ಖಾಸಗಿ ಶಾಲೆಗಳನ್ನು ಅಪ್ಪಿಕೊಳ್ಳುತ್ತಿದ್ದೇವೆ. ಶಾಲೆಯಲ್ಲಿನ ಶಿಕ್ಷಕರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಹುದ್ದೆ ಪಡೆದುಕೊಂಡಿದ್ದಾರೆ. ಅವರಲ್ಲಿನ ನುರಿತ ಪ್ರಾವೀಣ್ಯತೆಯನ್ನು ಪಡೆದುಕೊಳ್ಳುವಲ್ಲಿ ನಾವೇ ಹಿಂದೆ ಬಿದ್ದಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯ ಶಿಕ್ಷಕಿ ತ್ರಿವೇಣಿ ಅವರು ಮಾತನಾಡಿ, ಶಾಲೆಯ ಶತಮಾನೋತ್ಸವ ಸಮಾರಂಭ ಆಚರಣೆ ದಿನಾಂಕ ನಿಗದಿಯಾದ ಬಳಿಕ ಭಯವಾಗಿತ್ತು. ಆದರೆ ಇಡೀ ಗ್ರಾಮದವರು, ಹಿರಿಯ ವಿದ್ಯಾರ್ಥಿಗಳು, ಮುಖಂಡರು ಸಕಲ ರೀತಿಯಲ್ಲಿ ಸ್ಪಂದಿಸಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರನ್ನು ಶಾಲೆಯ ಪರವಾಗಿ ಅಭಿನಂದಿಸುತ್ತೇನೆ ಎಂದರು.

ಸಮಾರಂಭದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪುಟ್ಟರಾಜು, ಉಪಾಧ್ಯಕ್ಷ ಪ್ರಭಾಕರ್, ಸದಸ್ಯರಾದ ರಂಗೇಗೌಡ, ರಂಗಸ್ವಾಮಿ, ಪ್ರಕಾಶ್ ರಾಜೇ ಅರಸ್, ನಯನ, ಪ್ರಸನ್ನ ಕುಮಾರ್, ನಿವೃತ್ತ ಶಿಕ್ಷಕ ಮಹದೇವಪ್ಪ, ಸಿಆರ್‌ಪಿ ಶ್ರೀಲಿತಾ, ಶಿಕ್ಷಕ ಲೋಕೇಶ್, ಗ್ರಾಮಸ್ಥರಾದ ಕುಮಾರ್ ರೆಡ್ಡಿ, ಅಜಯ್, ಗಣೇಶ್ ರಾಜೇ ಅರಸ್, ಶಿಕ್ಷಕರಾದ ರಮೇಶ್ ಡಿ., ಕೀರ್ತಿರಾಜ್, ಭೂಮಿಕ, ಕಲೀಷ್, ಪುಟ್ಟಸ್ವಾಮಿ ಉಪಸ್ಥಿತರಿದ್ದರು.

# ನ್ಯಾಪೇಡ್‌ಗೆ ರಾಗಿ ಮಾರಾಟಕ್ಕೆ ಅವಸರ ಬೇಡ

• ಪ್ರಜೋದಯ ವರದಿ

**ಅರಸೀಕೆರೆ:** ನ್ಯಾಪೇಡ್‌ಗೆ ರಾಗಿ ಬಿಡಲು ರೈತರು ಅವಸರ ಮಾಡಬೇಡಿ. ತಾಲ್ಲೂಕಿನ ರೈತರು ಬೆಳೆದಿರುವ ರಾಗಿಯನ್ನು ನ್ಯಾಪೆಡ್ ಖರೀದಿಸಲಿದೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.



ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ತೆರೆದಿರುವ ನ್ಯಾಪೆಡ್ ಖರೀದಿ ಕೇಂದ್ರಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೆ ರೈತರು ಹಾಗೂ ನ್ಯಾಪೆಡ್ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿದರು.

ವ್ಯವಸ್ಥಿತವಾಗಿ ಮಧ್ಯವರ್ತಿಗಳು ತಾವು ಸಂಗ್ರಹಿಸಿಕೊಂಡಿದ್ದ ರಾಗಿಯನ್ನು ನ್ಯಾಪೆಡ್ ಕೇಂದ್ರಕ್ಕೆ ಬಿಡುತ್ತಿದ್ದಾರೆ ಆದರೆ, ರೈತರು ತರುತ್ತಿರುವ ರಾಗಿ ತೆಗೆದುಕೊಳ್ಳಲು ನ್ಯಾಪೆಡ್ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ ಎಂದು ರೈತರು ಶಾಸಕರ ಮುಂದೆ ಅಳಲು ತೋಡಿಕೊಂಡರು ಇದರಿಂದ ಆಕ್ರೋಶಗೊಂಡ ಶಾಸಕರು ರೈತರ ಹಿತ ಕಾಯದೆ ಮಧ್ಯವರ್ತಿಗಳಿಗೆ ಮ್ಯಾಪಡ್ ಅಧಿಕಾರಿಗಳು ಮಣೆ ಹಾಕಿದ್ದು ಕಂಡು ಬಂದರೆ, ನಿರ್ಧಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಾನೇ ಶಿಫಾರಸ್ಸು ಮಾಡುತ್ತೇನೆ ಎಂದು ಎಚ್ಚರಿಕೆ ನೀಡಿದರು.

ರೈತರು ಸಹ ನ್ಯಾಪೆಡ್ ಅಧಿಕಾರಿಗಳು ತಮಗೆ ನೀಡಿದ ದಿನಾಂಕದಂದು ತಾವು ಬೆಳೆದ ರಾಗಿಯನ್ನು ಮಾರುಕಟ್ಟೆಗೆ ತನ್ನಿ ಆಗ ನಿಮ್ಮ ರಾಗಿಯನ್ನು ತೆಗೆದುಕೊಳ್ಳಲಿಲ್ಲ ಎಂದರೆ ನನ್ನ ಗಮನಕ್ಕೆ ತನ್ನಿ ನಾನೇ ಖುದ್ದು ಬಂದು ನೀವು ತಂದರಾಗಿಯನ್ನು ನ್ಯಾಫೆಡ್ ಕೇಂದ್ರಕ್ಕೆ ಬಿಡಿಸುತ್ತೇನೆ ಎಂದು ಅವರು ಭರವಸೆ ನೀಡಿದರು.

ಒಂದು ಚೀಲಕ್ಕೆ 20 ರೂಪಾಯಿ ಅಮಾಲಿಗಳಿಗೆ ದರ ನಿಗದಿಪಡಿಸಿದ್ದರು ಅಮಾಲಿಗಳು ರೈತರಿಂದ ಹೆಚ್ಚು ಹಣ ಕೇಳುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ದೂರು ಕೇಳಿ ಬಂತು ಅಲ್ಲೇ ಇದ್ದ ಹಮಾಲಿಗಳೊಂದಿಗೆ ಮಾತುಕತೆ ನಡೆಸಿದ ಶಾಸಕರು ಕ್ವಿಂಟಲ್ ರಾಗಿಗೆ ರೈತರಿಂದ 10 ರೂ. ಲೋಡರ್ಸ್‌ಗೆ, ಲಾರಿಗೆ 10 ರೂ. ಹೀಗೆ ಒಟ್ಟು 20 ರೂ. ಮಾತ್ರ ಪಡೆಯಬೇಕೆಂದು ತಾಕೀತು ಮಾಡಿದರು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಶೇಖರ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಸಿದ್ದರಂಗಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಜಯರಾಂ ರೈತ ಸಂಘದ ಮುಖಂಡರಾದ ಬೋರನಕಪ್ಪಲು ಶಿವಲಿಂಗಪ್ಪ, ದಯಾನಂದ್ ಇದ್ದರು.

# ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ

• ಪ್ರಜೋದಯ ವರದಿ

**ಬೇಲೂರು:** ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಸ್ವಂತ ಉದ್ಯೋಗಕ್ಕೆ ಸಹಾಯವಾಗುವಂತೆ ಹೊಲಿಗೆ ಯಂತ್ರಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ನಿಗಮದ ವತಿಯಿಂದ ಅರ್ಹ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ವಿತರಿಸಿ ಮಾತನಾಡಿದ ಅವರು, ಬಡವರಲಿ ಬಡವರನ್ನು ಗುರುತಿಸಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಸ್ವಂತ ಉದ್ಯೋಗಕ್ಕೆ ಸಹಾಯವಾಗುವಂತೆ ಹೊಲಿಗೆ ಯಂತ್ರಗಳನ್ನು ಅರ್ಹ ಫಲಾನುಭವಿಗಳ ಆಯ್ಕೆ ಮಾಡಿ ವಿತರಣೆ ಮಾಡಲಾಗುತ್ತಿದ್ದು ಮಹಿಳೆಯರು ಸಮರ್ಪಕವಾಗಿ



ಬಳಸಿಕೊಳ್ಳುವುದರ ಮೂಲಕ ಆರ್ಥಿಕವಾಗಿ ಸದೃಢರಾಗಿ ಸ್ವಾಭಿಮಾನದಿಂದ ಬದುಕಬೇಕೆಂದು ತಿಳಿಸಿದರು.

ತಾಲ್ಲೂಕಿನ 70 ಜನ ಮಹಿಳೆಯರು ಅರ್ಜಿ ಸಲ್ಲಿಸಿದರು ಅಧಿಕಾರಿಗಳು ಬಡವರನ್ನು ಗುರುತಿಸಿ 19 ಜನರನ್ನು ಆಯ್ಕೆ ಮಾಡಲಾಗಿದೆ ಮಹಿಳೆಯರು ಇದನ್ನು ಸದುಪಯೋಗ ಪಡಿಸಿಕೊಂಡು ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವ ಮಹಿಳೆಯರು ಸ್ವಾವಲಂಬಿಯಾಗಿ ಬದುಕಲು ಮುಂದೆ ಬರುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ದುಡಿದ ಹಣ ದಲ್ಲಿ ಸ್ವಲ್ಪ ಭಾಗದಷ್ಟು ಉಳಿತಾಯ ಮಾಡಿ ಸಂಕಷ್ಟದ ಸಮಯದಲ್ಲಿ ಬಳಸಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ವ್ಯವಸ್ಥಾಪಕ ರಾಕೇಶ್, ತಾಲ್ಲೂಕು ಬಿಸಿಎಂ ಸಹಾಯಕ ನಿರ್ದೇಶಕಿ ಶೋಭಾ ಇನ್ನಿತರರು ಹಾಜರಿದ್ದರು.

# ಚ.ರಾ.ಪಟ್ಟಣದ ಉದ್ಯಾನವನದಲ್ಲಿ ಓಪನ್ ಜಿಮ್ ಉದ್ಘಾಟನೆ

## ದೇಹವನ್ನು ದಂಡಿಸುವ ಮೂಲಕ ಉತ್ತಮ ಆರೋಗ್ಯ ಪಡೆಯಿರಿ: ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಉದ್ಯಾನವನಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿದಾಗ ಜನರು ಹೆಚ್ಚು ಆಕರ್ಷಿತರಾಗಿ ದೇಹವನ್ನು ದಂಡಿಸುವ ಮೂಲಕ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಹಕಾರಿಯಾಗುತ್ತದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣ ವ್ಯಾಪ್ತಿಯ ಹೇಮಾವತಿ ಉದ್ಯಾನವನ, ಹೌಸಿಂಗ್ ಬೋರ್ಡ್, ವೆಂಕಟೇಶ್ವರ ಲೇಔಟ್ ಮತ್ತು ಪುನೀತ್ ರಾಜಕುಮಾರ್ ಉದ್ಯಾನವನಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ 1.8 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲಾಗಿರುವ ಓಪನ್ ಜಿಮ್ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ದಿನನಿತ್ಯ ಉದ್ಯಾನವನಗಳಲ್ಲಿ ವಾಕಿಂಗ್ ನಡೆಸುವ ಸಾರ್ವಜನಿಕರಿಂದ ಓಪನ್ ಜಿಮ್ ಅಳವಡಿಸುವಂತೆ ಮನವಿ ಬಂದ ಹಿನ್ನಲೆಯಲ್ಲಿ ಬೇಡಿಕೆಗೆ ಅನುಗುಣವಾಗಿ ಮೊದಲ ಹಂತದಲ್ಲಿ 6 ಉದ್ಯಾನವನಗಳಿಗೆ ಓಪನ್ ಜಿಮ್ ಅಳವಡಿಸಲಾಗಿದೆ. ಎರಡನೇ ಹಂತದಲ್ಲಿ ಹೇಮಾವತಿ ನಾಲೆಯ ಎಡಭಾಗದಲ್ಲಿರುವ 4ನೇ ಉದ್ಯಾನವನ್ನು ಮಕ್ಕಳಿಗಷ್ಟೇ ಸೀಮಿತಗೊಳಿಸಿ ಅವರಿಗೆ ಅಗತ್ಯವಿರುವ ಆಟಿಕೆ ಉಪಕರಣಗಳನ್ನು ಅಳವಡಿಸಲಾಗುವುದು, ಇನ್ನೊಂದು ಉದ್ಯಾನವನದಲ್ಲಿ ಮಕ್ಕಳಿಗೆ ಸ್ಕೇಟಿಂಗ್ ತರಬೇತಿ ನಡೆಯುತ್ತಿದ್ದು, ಪೋಷಕರ ಮನವಿ ಮೇರೆಗೆ ಸ್ಕೇಟಿಂಗ್ ರ‍್ಯಾಕ್ ಮಾಡಿಕೊಡಲಾಗಿದೆ ಎಂದರು.



ಹೇಮಾವತಿ ಇಲಾಖೆಯಡಿಯ ನಾಲ್ಕು ಉದ್ಯಾನವಗಳ ಪೈಕಿ ಪುರುಷರಿಗೊಂದು, ಮಹಿಳೆಯರಿಗೊಂದು ಮತ್ತು ಮಕ್ಕಳಿಗೊಂದು ಉದ್ಯಾನವನವನ್ನು ಮೀಸಲಿರಿಸಲಾಗಿದೆ. ಈ ಪೈಕಿ ಎರಡು ಉದ್ಯಾನವನಗಳಲ್ಲಿ ಓಪನ್ ಜಿಮ್, ಮತ್ತೊಂದರಲ್ಲಿ ಮಕ್ಕಳಿಗೆ ಆಟಿಕೆ, ಮತ್ತೊಂದರಲ್ಲಿ ಸ್ಕೇಟಿಂಗ್‌ಗೆ ಅವಕಾಶ, ಕಲ್ಪಿಸಲಾಗಿದೆ, ಇದರೊಂದಿಗೆ ಯೋಗಾಭ್ಯಾಸ ಮಾಡುವವರಿಗೆ ಯೋಗಾ ಮಂಟಪವನ್ನು ನಿರ್ಮಿಸಲಾಗಿದೆ. ಪಟ್ಟಣದ ಜನತೆ ಇವರೆಲ್ಲವುದರ ಬಳಕೆಯೊಂದಿಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರು. ಇದೇ ವೇಳೆ ಉದ್ಯಾನವನಗಳಲ್ಲಿ ರಾತ್ರಿ ವೇಳೆಯಲ್ಲಿಯೂ ವಿಹಾರ ಮಾಡುವ ಕಾರಣ ಉತ್ತಮ ದೀಪದ ವ್ಯವಸ್ಥೆ ಮಾಡುವಂತೆ ಸಾರ್ವಜನಿಕರು ಮನವಿ ಮಾಡಿದ ಹಿನ್ನಲೆಯಲ್ಲಿ ಪುರಸಭೆಯಿಂದ ದೀಪದ ವ್ಯವಸ್ಥೆ ಮಾಡಲಾಗುವುದು, ಇವುಗಳ ನಿರ್ವಹಣೆಯನ್ನು ಹೇಮಾವತಿ ಇಲಾಖೆಗೆ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ಮೋಹನ್‌ಕುಮಾರ್, ಕೆ.ಜೆ.ಸುರೇಶ್, ನವೀನ್, ಟಿಎಪಿಸಿಎಂಎಸ್ ನಿರ್ದೇಶಕರಾದ ಅನಿಲ್‌ಕುಮಾರ್, ಕುಂಬಾರಹಳ್ಳಿ ರಮೇಶ್, ಮುಖಂಡರಾದ ತಮ್ಮಯ್ಯ, ರಮೇಶ್, ರಾಮಕೃಷ್ಣ, ಪುಟ್ಟರಾಜು, ಪುರಸಭಾ ಮುಖ್ಯಾಧಿಕಾರಿ ಆರ್.ಯತೀಶ್‌ಕುಮಾರ್ ಸೇರಿ ಇನ್ನಿತರರು ಇದ್ದರು.

## ಉಚಿತ ವಾಹನ ಚಾಲನಾ ತರಬೇತಿ

**ಹಾಸನ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ. ನಿರುದ್ಯೋಗ ಯುವಕ/ಯುವತಿಯರಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯೊಂದಿಗೆ ಒಂದು ತಿಂಗಳ ಲಘು/ಭಾರಿ ವಾಹನ ಚಾಲನಾ ತರಬೇತಿ ಹಾಗೂ ಪರವಾನಗಿ ವಿತರಣೆ ಮಾಡುವ ಕಾರ್ಯಕ್ರಮದಡಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಸಂಸ್ಥೆಯು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದೂರವಾಣಿ ಸಂ: 9972293886, 8904045818, 9686684655 ಸಂಪರ್ಕಿಸಲು ತಿಳಿಸಿದ್ದಾರೆ.

# ಕಾಫಿ ಬೆಳೆಗಾರರ ಸಮಸ್ಯೆಗಳಿಗೆ ಸದನದಲ್ಲಿ ಧ್ವನಿ: ಶಾಸಕ ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಬೇಲೂರು:** ಮಾನವ- ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸುವುದಾಗಿದೆ. ಸದನದಲ್ಲಿ ಕಾಫಿ ಬೆಳೆಗಾರರ ಸಂಕಷ್ಟಗಳ ಬಗ್ಗೆ ಗಂಭೀರವಾಗಿ ಚರ್ಚಿಸಿ, ಅವರಿಗೆ ನ್ಯಾಯ ಸಿಗುವಂತೆ ಪ್ರಯತ್ನಿಸಲಾಗುವುದು ಎಂದು ಶಾಸಕ ಹೆಚ್.ಕೆ. ಸುರೇಶ್ ಭರವಸೆ ನೀಡಿದರು.

ಕರ್ನಾಟಕ ಬೆಳೆಗಾರರ ಒಕ್ಕೂಟ, ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘ ಹಾಗೂ ತಾಲ್ಲೂಕು ಕಾಫಿ ಬೆಳೆಗಾರರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 25 ನೇ ವರ್ಷದ ಬೆಳ್ಳಿ ಹಬ್ಬ ವಾರ್ಷಿಕ ಮಹಾಸಭೆ ಮತ್ತು ಕೃಷಿ ಹಾಗೂ ತೋಟಗಾರಿಕೆ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ, ಕಾಫಿ ಬೆಳೆಗಾರರ ಸಂಕಷ್ಟಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಮನವಿ ಸಲ್ಲಿಸಲಾಗುವುದು ಎಂದರು.

ಮಾನವ- ಆನೆ ಸಂಘರ್ಷ ಕುರಿತು ಈಗಾಗಲೇ ಸದನದಲ್ಲಿ ಮಾತನಾಡಿದ್ದೇನೆ.



ಸಮರ್ಪಕ ಉತ್ತರ ಸಿಗದಿದ್ದರೂ, ಅರಣ್ಯ ಸಚಿವರ ಗಮನಕ್ಕೆ ಮತ್ತೊಮ್ಮೆ ಈ ಭಾಗದಲ್ಲಿ ಆಗುತ್ತಿರುವ ಅನಾಹುತಗಳನ್ನು ಗಮನಕ್ಕೆ ತಂದು, ಸದನದಲ್ಲಿ ಧ್ವನಿ ಎತ್ತುವೆ. ಸುಮಾರು 2 ಸಾವಿರ ಎಕರೆ ಪ್ರದೇಶದಲ್ಲಿ ಆನೆದಾಮ ಸ್ಥಾಪಿಸಲು ಸರ್ಕಾರ ನಿರ್ಧರಿಸಿರುವುದನ್ನು ಕೂಡಲೇ ಜಾರಿಗೆ ತರಬೇಕು. ಕಾಫಿ ಬೆಳೆಗಾರರ ಸಮಸ್ಯೆಗಳ ಬಗ್ಗೆ ಸರ್ಕಾರದೊಂದಿಗೆ ಸಮಗ್ರವಾಗಿ ಚರ್ಚಿಸಲಾಗುವುದು ಎಂದು ಹೇಳಿದರು.

ಕಾಫಿ ಬೆಳೆಯನ್ನು ವಿಶ್ವಮಟ್ಟಕ್ಕೆ ಪರಿಚಯಿಸಿ ಅಪಾರ ಕೊಡುಗೆ ನೀಡಿದ ಮಹಾನ್ ವ್ಯಕ್ತಿ ಸಿದ್ದಾರ್ಥ ಹೆಗ್ಡೆ ಅವರ ಸೇವೆಯನ್ನು ಸ್ಮರಿಸಿದರು. ಕಾಫಿ ಬೆಳೆಗಾರರನ್ನು ಗೌರವಿಸುವ ಕಾರ್ಯ ಎಲ್ಲರಿಂದಲೂ ನಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಆನೆಗಳ ಹಾವಳಿ, ಮಳೆ ಅಭಾವ, ಅತಿವೃಷ್ಟಿ ಹಾಗೂ ಅನಾವೃಷ್ಟಿ ನಡುವೆಯೂ ಕಾಫಿ ಬೆಳೆಗಾರರು ತಮ್ಮ ಬೆಳೆ ಉಳಿಸಿಕೊಂಡು ಮುನ್ನಡೆಯುತ್ತಿದ್ದಾರೆ ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಕಾಫಿ ಬೆಳೆಗಾರ ಸಂಘದ ಅಧ್ಯಕ್ಷ ಅದ್ದೂರಿ ಕುಮಾರ್ ಅವರು, ಕಾಫಿ ಬೆಳೆಗಾರರು ಯಾವುದೇ ಪ್ರದೇಶವನ್ನು ಒತ್ತುವರಿ ಮಾಡಿಲ್ಲ, ಕಾನೂನುಬದ್ಧವಾಗಿ ಸಾಗುವಳಿ ಮಾಡುತ್ತಿದ್ದೇವೆ. ಸರ್ಕಾರಕ್ಕೆ ತಪ್ಪು ಮಾಹಿತಿ ಹೋಗಬಾರದು ಎಂದು ತಿಳಿಸಿದರು.

ಸಂಘವು ಇಂದು ಉತ್ತಮವಾಗಿ ಬೆಳೆಯುತ್ತಿರುವುದಕ್ಕೆ ಹಿಂದಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪರಿಶ್ರಮವೇ ಮುಖ್ಯ ಕಾರಣವಾಗಿದೆ ಅವರ ಶ್ರಮ, ಸಂಘಟನಾ ಶಕ್ತಿ ಮತ್ತು ಬೆಳೆಗಾರರ ಏಕತೆಯಿಂದಲೇ ಸಂಘ ಬಲಿಷ್ಠವಾಗಿ ಬೆಳೆಯಲು ಸಾಧ್ಯವಾಗಿದೆ ಎಂದರು. ಮುಂದೆಯೂ ಸಹ ಬೆಳೆಗಾರರ ಹಿತಾಸಕ್ತಿಗಾಗಿ ಸಂಘ ಬದ್ಧವಾಗಿ ಕೆಲಸ ಮಾಡಲಿದೆ ಎಂದು ಅಧ್ಯಕ್ಷರು ಭರವಸೆ ನೀಡಿದರು.

ನಂತರ ವಿಧಾನ ಪರಿಷತ್ ಸದಸ್ಯರು ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತು ಅಧ್ಯಕ್ಷ ಬಿ.ಎಲ್.ಶಂಕರ್ ಮಾತನಾಡಿ ಮಾನವ ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಅಗತ್ಯ. ಮಾನವ ಮತ್ತು ಕಾಡುಪ್ರಾಣಿಗಳ ನಡುವಿನ ಸಂಘರ್ಷ ದಿನೇ ದಿನೇ ಹೆಚ್ಚುತ್ತಿದ್ದು, ಇದಕ್ಕೆ ಸಮತೋಲನ ಸಾಧಿಸುವ ರೀತಿಯಲ್ಲಿ ಸರ್ಕಾರ ಗಂಭೀರವಾಗಿ ಆಲೋಚಿಸಬೇಕು ಎಂದರು. ಪ್ರಕೃತಿ ಮತ್ತು ಪ್ರಗತಿಯ ನಡುವಿನ ಸಮತೋಲನ ತಪ್ಪಿದಾಗ ಇಂತಹ ಘಟನೆಗಳು ಹೆಚ್ಚಾಗುತ್ತವೆ. ಈ ಸಂಘರ್ಷದ ಪ್ರಮುಖ ಕಾರಣ ಸಸ್ಯಹಾರಿ ಮತ್ತು ಮಾಂಸಹಾರಿ ಪ್ರಾಣಿಗಳಿಗೆ ಅರಣ್ಯ ಇಲಾಖೆಯ ಪ್ರದೇಶದಲ್ಲಿ ಆಹಾರದ ಕೊರತೆ ಎದ್ದು ಕಾಣುತ್ತಿದೆ ಅದ್ದರಿಂದಲ್ಲೆ ನಾಡಿನತ್ತ ಕಾಡಾನೆ ಸೇರಿದಂತೆ ನವಿಲು ಚಿರತೆ ಕಾಡುಕೋಣ ಕಾಡು ಎಮ್ಮೆ ಎಲ್ಲಾ ರೀತಿಯ ಪ್ರಾಣಿಗಳು ಬರುತ್ತಿವೆ ಪ್ರಾಣಿಗಳು ತಮ್ಮ ವಾಸಸ್ಥಾನವನ್ನು ಕಳೆದುಕೊಳ್ಳುತ್ತಿವೆ ಸರ್ಕಾರಗಳು ಬೆಳೆಗಾರರ ಜೊತೆಗೆ ನಿಂತು ಸಹಕಾರಿಸಬೇಕು ಎಂದರು.

ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾಫಿ ಬೆಳೆಗಾರರು, ಸಂಘದ ಕಾರ್ಯದರ್ಶಿ ಸಂಜಯ್ ಕೌರಿ ಸೇರಿದಂತೆ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು ಇದ್ದರು.

## ಕುರಿ, ಮೇಕೆ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನ

**ಹಾಸನ:** ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆರವರ ವತಿಯಿಂದ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕುರಿ-ಮೇಕೆ ಘಟಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಗುರುತಿನ ಸಂಖ್ಯೆ ಹೊಂದಿರುವ ಜಿಲ್ಲೆಯ ಆಸಕ್ತ ಮತ್ತು ಅರ್ಹ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅರ್ಜಿದಾರರು ಆಯಾ ತಾಲ್ಲೂಕಿನ ಮುಖ್ಯ ಪಶು ವೈದ್ಯಾಧಿಕಾರಿಗಳು ಪಶು ಆಸ್ಪತ್ರೆ ಇವರ ಕಚೇರಿಯಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು, ಅವಶ್ಯಕ ದಾಖಲಾತಿಗಳನ್ನು ಮಾ.12ರೊಳಗೆ ಕಚೇರಿಗೆ ಸಲ್ಲಿಸಬಹುದು.

# ಯುದ್ಧ ನಿಲ್ಲಿಸಲು ನೆತನ್ಯಾಹುಗೆ ಮೋದಿ ಮನವಿ

• ಪ್ರಜೋದಯ ವರದಿ

**ನವದೆಹಲಿ:** ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿಯ ನಂತರ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚಿರುವ ನಡುವೆ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ದೂರವಾಣಿ ಕರೆ ಮಾಡಿ, ನಾಗರಿಕರ ಸುರಕ್ಷತೆಯ ಬಗ್ಗೆ ಒತ್ತಿ ಹೇಳಿ, ಯುದ್ಧವನ್ನು ಆದಷ್ಟು ಬೇಗ ನಿಲ್ಲಿಸುವಂತೆ ಮನವಿ ಮಾಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ''ಸದ್ಯದ ಪ್ರಾದೇಶಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿದ್ದೇನೆ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿ, ಜನರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವಂತೆ, ಜೊತೆಗೆ ಬೇಗನೇ



ಯುದ್ಧ ನಿಲ್ಲಿಸುವಂತೆ ಮನವಿ ಮಾಡಿದೆ'' ಎಂದು ಹೇಳಿದ್ದಾರೆ

ಅಮೆರಿಕ, ಇಸ್ರೇಲ್ ಮತ್ತು ಇರಾನ್ ಮಧ್ಯದ ಯುದ್ಧದಿಂದಾಗಿ ಭೌಗೋಳಿಕ ರಾಜಕೀಯ ಅನಿಶ್ಚಿತತೆ ಮತ್ತು ಜಾಗತಿಕ ಭದ್ರತಾ ಆತಂಕ ಮೂಡಿರುವ ಮಧ್ಯೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬೆಂಜಮಿನ್ ನೆತನ್ಯಾಹು ಸಂಭಾಷಣೆ ನಡೆದಿದೆ. ಸ್ಥಿರತೆ ಪುನಃಸ್ಥಾಪಿಸಲು ನಿರಂತರವಾಗಿ ಸಂಯಮ, ಸಂವಾದ ಮತ್ತು ರಾಜತಾಂತ್ರಿಕತೆಗೆ ಭಾರತ ಕರೆ ನೀಡಿದೆ.

ರಾಜಸ್ಥಾನ, ಗುಜರಾತ್, ತಮಿಳುನಾಡು ಮತ್ತು ಪುದುಚೇರಿಗಳ ಎರಡು ದಿನಗಳ ಪ್ರವಾಸದಿಂದ ಹಿಂದಿರುಗಿದ ನಂತರ ಪ್ರಧಾನಿ ಮೋದಿ ಅವರು ನವದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್.ಜೈಶಂಕರ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಸೇರಿದಂತೆ ಹಿರಿಯ ಸಚಿವರು ಮತ್ತು ಉನ್ನತ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಅಮೆರಿಕ, ಇಸ್ರೇಲ್ ದಾಳಿಗೆ ಪ್ರತೀಕಾರವಾಗಿ ಗಲ್ಫ್ ರಾಷ್ಟ್ರದ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ.

# ಧರ್ಮದಿಂದಲೇ ವಿಶ್ವಕ್ಕೆ ಶಾಂತಿ, ಮಾನವ ಧರ್ಮಕ್ಕೆ ಜಯವಾಗಲಿ

## ಜಗದ್ಗುರು ಶ್ರೀ ರೇಣುಕಾಚಾರ್ಯರ ಸಂದೇಶವು ಇಂದಿನ ಅಶಾಂತಿಯ ಜಗತ್ತಿಗೆ ಅತ್ಯಂತ ಅವಶ್ಯಕ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಾನವ ಧರ್ಮಕ್ಕೆ ಜಯವಾಗಲಿ. ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಜಗದ್ಗುರು ಶ್ರೀ ರೇಣುಕಾಚಾರ್ಯರ ಸಂದೇಶವು ಇಂದಿನ ಅಶಾಂತಿಯ ಜಗತ್ತಿಗೆ ಅತ್ಯಂತ ಅವಶ್ಯಕವಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ತಾಲ್ಲೂಕು ಆಡಳಿತ ಹಾಗೂ ತಾಲೂಕು ವೀರಶೈವ ಸಮಾಜದ ವತಿಯಿಂದ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೋತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಮೌಲ್ಯಯುತ ಸಮಾಜ ನಿರ್ಮಾಣಕ್ಕೆ ಅವರ ತತ್ವಗಳು ಆದರ್ಶವಾಗಿವೆ ಎಂದರು.

ಇಂದಿನ ದಿನಗಳಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ಧ ಮತ್ತು ಹಿಂಸೆಯ ವಾತಾವರಣವು ಆತಂಕಕಾರಿಯಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯ ಶಾಂತಿ ಮಂತ್ರ ಮತ್ತು ರೇಣುಕಾಚಾರ್ಯರ ತತ್ವಗಳು ಜಗತ್ತಿಗೆ ದಾರಿದೀಪವಾಗಲಿ ಎಂದು ತಿಳಿಸಿದರು.

ರೇಣುಕಾಚಾರ್ಯರು ಅಂದಿನ ಕಾಲದಲ್ಲೇ ಮಹಿಳೆಯರಿಗೆ ಸಮಾನ ಗೌರವ ನೀಡಿದ್ದರು. ಅವರು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ್ದಾರೆ. ದಯೆ, ಕರುಣೆ, ಅಹಿಂಸೆ ಮತ್ತು ಸತ್ಯದ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ, ಹಿಂದಿನ ಕಾಲದಲ್ಲಿ ಮಹಾನ್ ಪುರುಷರು ಸಮಾಜದ ಉನ್ನತಿಗಾಗಿ ಶ್ರಮಿಸಿದ್ದಾರೆ ಎಂದು ವರ್ಣಿಸಿದರು.



ಸಮಾನತೆ, ಮನುಕುಲದ ಉದ್ದಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಡಿ ಇರಿಸಿದ್ದಾರೆ. ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವು ಸಾಗಬೇಕಿದೆ ಎಂದು ಸಲಹೆ ನೀಡಿದರು.

ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ತಮ್ಮ ವಚನಗಳಲ್ಲಿ ಮತ್ತು ಬಸವಾದಿ ಶರಣರು ವಚನ ಸಾಹಿತ್ಯದ ಮೂಲಕ ಜನರಿಗೆ ಸರಿ ಮಾರ್ಗ ತೋರಿದ್ದಾರೆ. ಮನೆಯಲ್ಲಿ ತಾಯಂದಿರು ಮಕ್ಕಳಿಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ಹೇಳಲೇಬೇಕು ಎಂದರು.

ಪಾಲಕರು ಒಳ್ಳೆಯ ವಿದ್ಯಾಭ್ಯಾಸದ ಜೊತೆಗೆ ಒಳ್ಳೆಯ ಸಂಸ್ಕೃತಿ ಕೂಡ ಕೊಡಬೇಕು, ಮನುಷ್ಯ ಜನ್ಮವು ಅತ್ಯಂತ ದುರ್ಲಭವಾದುದು. ಜೀವನದಲ್ಲಿ ಸಾರ್ಥಕತೆ ಪಡೆಯಲು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಪೂಜೆ, ಜಪ ಮತ್ತು ಧ್ಯಾನ ಎಂಬ ಹತ್ತು ಧರ್ಮ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ರಾಜಣ್ಣ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ, ತಾಲ್ಲೂಕು ಅಧ್ಯಕ್ಷ ಗಿರೀಶ್, ಉಪ ತಹಸಿಲ್ದಾರ್ ಅನಿಲ್ ಕುಮಾರ್, ಸಮಾಜದ ಮುಖಂಡರಾದ ಅರ್ಚಕ ಶಿವಾನಂದ್, ತಗಡೂರು ಮಂಜಣ್ಣ, ರುದ್ರೇಶ್, ರಕ್ಷಿತ್ ಭಾಗವಹಿಸಿದ್ದರು.

## ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸದ ತ್ಯಾಜ್ಯ ವಿಲೇವಾರಿ ಘಟಕಗಳು | ನಿತ್ಯವೂ ಹೆಚ್ಚುತ್ತಲೇ ಇರುವ ಕಸದ ರಾಶಿ

# ರಾಜ್ಯ ಹೆದ್ದಾರಿ ಪಕ್ಕದಲ್ಲಿ ತ್ಯಾಜ್ಯ: ಕೃಷಿಕರಿಗೆ, ಸವಾರರಿಗೆ ಸಂಕಷ್ಟ

- ರವಿ ದುಮ್ಮಿ

**ಅರಕಲಗೂಡು:** ತಾಲ್ಲೂಕಿನ ಬಹುತೇಕ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ, ಜಿಲ್ಲಾ ಸಂಪರ್ಕ ರಸ್ತೆ ಪಕ್ಕದಲ್ಲಿನ ಖಾಲಿ ಜಾಗದಲ್ಲಿ ಅನಗತ್ಯ ತ್ಯಾಜ್ಯಗಳನ್ನು ಹಾಕಿ ಸುತ್ತಮುತ್ತಲ ಗ್ರಾಮಗಳ ಜನರು, ಕೃಷಿ ಜಮೀನಿನಲ್ಲಿ ತೊಡಗಿಕೊಳ್ಳುವ ಹಾಗೂ ರಸ್ತೆಯಲ್ಲಿ ಸಂಚರಿಸುವವರಿಗೆ ಮಲೀನತೆ ಹರಡಲು ಕಾರಣವಾಗುತ್ತಿದೆ.

ತಾಲ್ಲೂಕಿನಲ್ಲಿ 36 ಗ್ರಾಪಂ ಹಾಗೂ ಒಂದು ಪಟ್ಟಣ ಪಂಚಾಯಿತಿ ಕಾರ್ಯ ನಿರ್ವಹಿಸುತ್ತಿದೆ. ತಾಲೂಕು ಕೇಂದ್ರದಲ್ಲಿ ನಿತ್ಯವೂ ತ್ಯಾಜ್ಯ ಸಂಗ್ರಹಣೆ ಮಾಡಿ ವಿಲೇವಾರಿ ಘಟಕಕ್ಕೆ ಹಾಕಲಾಗುತ್ತಿದೆ. ಆದರೆ, ತಾಲ್ಲೂಕಿನ ರಾಮನಾಥಪುರ ಗ್ರಾಪಂ ಹೊರತುಪಡಿಸಿದರೆ, ಉಳಿದೆಲ್ಲ ಯಾವುದೇ ಗ್ರಾ.ಪಂ.ಗಳಲ್ಲಿ ತ್ಯಾಜ್ಯ ವಿಲೇವಾರಿ ಘಟಕಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಿಲ್ಲದಿರುವುದು ಕಂಡು ಬಂದಿದೆ.

ತಾಲ್ಲೂಕಿನಲ್ಲಿ ಹಾದು ಹೋಗಿರುವ ರಾಜ್ಯ ಹೆದ್ದಾರಿ, ಜಿಲ್ಲಾ ಸಂಪರ್ಕ ರಸ್ತೆಗಳ ಪಕ್ಕದಲ್ಲಿಯೇ ಕೋಳಿ ತ್ಯಾಜ್ಯ ಸೇರಿದಂತೆ ಹಳೆ ಮನೆಯ ಅನಗತ್ಯ ತ್ಯಾಜ್ಯಗಳನ್ನು ಹಾಕಿ ಮಲೀನತೆ ಉಂಟು ಮಾಡುತ್ತಿರುವುದು ಕಂಡು ಬಂದಿದೆ. ಈ ಹಿಂದೆ ಅರಕಲಗೂಡು ಪಟ್ಟಣ ಮತ್ತು ಕೊಣನೂರು ಎರಡು ಕೂಡ ಪುರಸಭೆ, ಮಧ್ಯಂತರ ಮಂಡಲ ಪಂಚಾಯಿತಿಯಾಗಿ ಕಾರ್ಯ ನಿರ್ವಹಿಸಿವೆ. ಇತ್ತೀಚಿನ ಜನಸಂಖ್ಯೆಗೆ ಅನುಗುಣವಾಗಿ ಕೊಣನೂರು ಗ್ರಾಪಂ ಆಗಿ ಕಾರ್ಯ ನಿರ್ವಹಿಸುತ್ತಿದೆ. ಇಷ್ಟೊಂದು ಹಿನ್ನೆಲೆ ಇರುವ ಕೊಣನೂರು ಗ್ರಾಪಂ ಶಾಶ್ವತ ತ್ಯಾಜ್ಯ ವಿಲೇವಾರಿ ಘಟಕವನ್ನು ಸ್ಥಾಪಿಸಿಕೊಂಡಿಲ್ಲದಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಕೊಣನೂರು ಗ್ರಾಪಂ ತಾಲೂಕಿನ ಎಲ್ಲಾ ಗ್ರಾಪಂಗಳಿಂದ ದೊಡ್ಡ ಗ್ರಾಪಂ ಆಗಿ ಕಾರ್ಯ ನಿರ್ವಹಿಸುತ್ತಿದೆ. ಸುಮಾರು 3 ಕಿಮೀ ದೂರದ ತನಕ ವಿಸ್ತೀರ್ಣವನ್ನು ಹೊಂದಿದೆ. ಅಂದಾಜು 10 ರಿಂದ 14 ಸಾವಿರ ಜನಸಂಖ್ಯೆಯನ್ನು ಹೊಂದಿದೆ ಎನ್ನಲಾಗಿದೆ. ಈ ಗ್ರಾಮ ಪಟ್ಟಣವಾಗಿ ಮಾರ್ಪಾಡಾಗಿದ್ದು, ನಿತ್ಯವೂ ಹೆಚ್ಚಿನ ತ್ಯಾಜ್ಯ ಉತ್ಪನ್ನವಾಗುತ್ತಿದೆ.



**ದುರ್ವಾಸನೆ:** ಪಂಚಾಯಿತಿ ವತಿಯಿಂದ ಗುರುತಿಸಿ ತ್ಯಾಜ್ಯ ಹಾಕುತ್ತಿರುವ ಜಾಗದಲ್ಲಿ ಕೊಣನೂರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಜನರು ಕೂಡ ಅನ ಗತ್ಯ ತ್ಯಾಜ್ಯಗಳನ್ನು ಹಾಕಿ ಸುಡುತ್ತಿರುವುದು ಸಹ ಕಂಡು ಬಂದಿದೆ. ಇದರಿಂದ ಅಕ್ಕಪಕ್ಕದಲ್ಲಿನ ಕೃಷಿ ಜಮೀನಿನಲ್ಲಿ ಕೆಲಸ ಮಾಡುವವರಿಗೆ, ದನ ಕುರಿ ಕಾಯುವವರಿಗೆ ಮಲೀನವಾದ ಹೊಗೆ, ದುರ್ವಾಸನೆ ಬೀರುತ್ತಿದೆ.

**ನಾಲೆಯ ನೀರು ಮಲೀನ :** ಪಂಚಾಯಿತಿ ಗುರುತಿಸಿ ತ್ಯಾಜ್ಯ ಹಾಕುತ್ತಿರುವ ಜಾಗದ ಪಕ್ಕದಲ್ಲಿ ಹಾರಂಗಿ ನಾಲೆ ಮತ್ತೊಂದು ಬದಿಯಲ್ಲಿ ಸಾರ್ವಜನಿಕ ರಸ್ತೆ ಇದೆ. ನಾಲೆ ಆಳ ವಾದ ಪ್ರದೇಶದಲ್ಲಿರುವ ಕಾರಣ ತ್ಯಾಜ್ಯದ ಬಂದಾಗ ಮತ್ತು ನಾಯಿ ನರಿಗಳು ಕೊಳೆತ ತ್ಯಾಜ್ಯಗಳನ್ನು ತಿನ್ನುವ ಸಲುವಾಗಿ ಕೆರೆದಾಗ ನೇರವಾಗಿ ತ್ಯಾಜ್ಯ ನಾಲೆಗೆ ಸೇರುತ್ತದೆ. ಈ ನೀರನ್ನು ಜನ ಜಾನುವಾರುಗಳಿಗೆ ಕುಡಿಯಲು, ಕೃಷಿಗೆ ಬಳಕೆ ಮಾಡುತ್ತಾರೆ.

**ವೈಜ್ಞಾನಿಕ ನಿರ್ವಹಣೆ ಇಲ್ಲ :** ಕೊಣನೂರು ತಾಲೂಕಿನಲ್ಲಿ ದೊಡ್ಡ ಗ್ರಾಪಂ ಆಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸಲುವಾಗಿ ತ್ಯಾಜ್ಯ ವಿಲೇವಾರಿ ಘಟಕವನ್ನು ಮುಂದಿನ 20 ವರ್ಷಗಳಿಗೆ ಅನುಗುಣವಾಗಿ ವಿಲೇವಾರಿ ಘಟಕ ಜಾಗ ಗುರುತು ಮಾಡಿ, ವೈಜ್ಞಾನಿಕವಾಗಿ ಅಭಿವೃದ್ಧಿಗೊಳಿಸಬೇಕಿತ್ತು. ಆದರೆ, ಈ ಯಾವುದೇ ಕಾರ್ಯವನ್ನು ಕೈಗೊಂಡಿಲ್ಲ. ಯಾವುದೇ ತಡಗೋಡೆ ಇಲ್ಲದೆ, ನಾಮಫಲಕವನ್ನು ಸಹ ಹಾಕದೇ ರಸ್ತೆ ಪಕ್ಕದಲ್ಲಿನ ಖಾಲಿ ಜಾಗದಲ್ಲಿ ತ್ಯಾಜ್ಯವನ್ನು ಸುರಿಯಲಾಗುತ್ತಿದೆ. ಅಲ್ಲದೆ ನಿತ್ಯವೂ ಬೆಂಕಿ ಹಚ್ಚುತ್ತಿರುವುದು ಸಹ ಕಂಡು ಬರುತ್ತಿದೆ. ಇದು ಪರಿಸರ ಮಾಲಿನ್ಯಕ್ಕೆ ನೇರವಾಗಿ ಕಾರಣ ವಾಗುತ್ತಿದೆ.

ಇನ್ನಾದರೂ ಈ ತ್ಯಾಜ್ಯ ವಿಲೇವಾರಿ ಘಟಕವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವ ಜತೆಗೆ ತ್ವರಿತವಾಗಿ ಸುತ್ತಾ ಕಾಂಪೌಂಡ್ ನಿರ್ಮಾಣ, ಸೂಚನಾ ಫಲಕ, ಲೈಟ್ ವ್ಯವಸ್ಥೆ ಮಾಡಬೇಕಿದೆ.

### ವೈಜ್ಞಾನಿಕ ನಿರ್ವಹಣೆಗೆ ಕ್ರಮ

ಗ್ರಾಪಂ ಸಭೆಯಲ್ಲಿನ ತೀರ್ಮಾನದಂತೆ ಪಂಚಾಯಿತಿ ಗಡಿಭಾಗದ ಖಾಲಿ ಜಾಗದಲ್ಲಿ ತ್ಯಾಜ್ಯ ವಿಲೇವಾರಿ ಘಟಕವನ್ನು ಗುರುತಿಸಿ ತ್ಯಾಜ್ಯವನ್ನು ಹಾಕಲಾಗುತ್ತಿದೆ. ಇದನ್ನೆ ನೆಪಮಾಡಿಕೊಂಡು ಇತರರು ಸಹ ತ್ಯಾಜ್ಯವನ್ನು ನಮ್ಮ ಜಾಗದಲ್ಲಿ ಹಾಕುತ್ತಿರುವುದು ಕಂಡು ಬಂದಿದೆ. ನಾವ್ಯಾರೂ ಕಸಕ್ಕೆ ಬೆಂಕಿ ಹಾಕುತ್ತಿಲ್ಲ. ಇತರೆ ಕಿಡಿಗೇಡಿಗಳು ಬೆಂಕಿ ಹಾಕುತ್ತಿದ್ದಾರೆ.ಇದರ ನಿರ್ವಹಣೆ ಕುರಿತು ಗ್ರಾಪಂ ಆಡಳಿತದೊಂದಿಗೆ ಚರ್ಚಿಸಿ ವೈಜ್ಞಾನಿಕ ನಿರ್ವಹಣೆಗೆ ಕ್ರಮ ವಹಿಸಲಾಗುವುದು. - ದಿವಾಕರ್, ಪಿಡಿಒ, ಕೊಣನೂರು ಗ್ರಾಪಂ.

# ಇಂದು ಯೋಗಿನಾರಾಯಣ ಯತೀಂದ್ರರ ಜಯಂತಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಾ.03 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ಯೋಗಿನಾರಾಯಣ ಯತೀಂದ್ರರ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ



ಮಾಜಿ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿದೇವೇಗೌಡ ಘನ ಉಪಸ್ಥಿತರಿರಲಿದ್ದು, ಕಂದಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಗೌರವ ಉಪಸ್ಥಿತರಿರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ. ಪಟೇಲ್, ಶಾಸಕರುಗಳಾದ ಹೆಚ್.ಡಿ. ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಸೂರಜ್ ರೇವಣ್ಣ, ಮಧು ಜಿ, ಮಾದೇಗೌಡ, ಕೆ.ವಿವೇಕಾನಂದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ., ಸಾಹಿತಿಗಳು ಎನ್.ಎಲ್ ಚನ್ನೇಗೌಡ ಉಪನ್ಯಾಸ ನೀಡಲಿದ್ದಾರೆ.

ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಯೋಗಿ ನಾರಾಯಣ ಯತೀಂದ್ರದ ಭಾವ ಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

# ಭೂ ಮಾಫಿಯಾ ತಡೆಗೆ ಎಸ್‌ಐಟಿಯಿಂದ ತನಿಖೆಯಾಗಲಿ

## ಕಂದಾಯ ಸಚಿವರಿಗೆ ರೇವಣ್ಣ ಒತ್ತಾಯ | ತಾಲ್ಲೂಕು ಕಚೇರಿಗೆ ಭೇಟಿ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನಲ್ಲಿ ಭೂ ಮಾಫಿಯಾ ಮಿತಿ ಮೀರಿದ್ದು ಕಂದಾಯ ಸಚಿವರು ವಿಶೇಷ ತನಿಖಾ ತಂಡ ರಚಿಸಿ (ಎಸ್‌ಐಟಿ) ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಮಾಜಿ ಸಚಿವ ಹೆಚ್ .ಡಿ.ರೇವಣ್ಣ ಅವರು ಆಗ್ರಹಿಸಿದರು.

ತಾಲ್ಲೂಕು ಕಚೇರಿಗೆ ಸೋಮವಾರ ಮಧ್ಯಾಹ್ನ ಭೇಟಿ ನೀಡಿ ವಿವಿಧ ಭೂ ಅಕ್ರಮಗಳ ಬಗ್ಗೆ ತರಾಟೆಗೆ ತೆಗೆದುಕೊಂಡ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಭೂ ಮಾಫಿಯಾದ ವರೊಂದಿಗೆ ಹಾಸನ ತಹಶೀಲ್ದಾರ್ ಸೇರಿ ಕಂದಾಯ ಇಲಾಖೆ ಅಧಿಕಾರಿಗಳು ಶಾಮೀಲಾಗಿದ್ದಾರೆ. ಕಟ್ಟಾಯ ಹೋಬಳಿ ಮಲ್ಲಪ್ಪನಳ್ಳಿಯಲ್ಲಿ ಬಂಡೆಗಳಿರುವ 11 ಎಕರೆ 9 ಗುಂಟೆ ಕರಾಬು ಭೂಮಿ ಯನ್ನು ಬಗರ್ ಹುಕುಂ ಸಾಗುವಳಿ ದಾಖಲೆ ಸೃಷ್ಟಿಸಿ ಮಂಜೂರು ಮಾಡಿ ಆನಂತರ ಅದೇ ಭೂಮಿಯನ್ನು ಮಾರಾಟ ಮಾಡಿ ಅಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಕಲ್ಲು ಗಣಿಗಾರಿಕೆ ನಡೆಸುತ್ತಿವೆ. ಈ ಗಣಿಗಾರಿಕೆ ತಹಶೀಲ್ದಾರ್ ಹಾಗ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ಕುಮ್ಮಕ್ಕಿನಿಂದಲೇ ನಡೆಯುತ್ತಿದೆಯೆಂದು ಆರೋಪಿಸಿದರು.

ತಾಲ್ಲೂಕಿನ ಚಿಕ್ಕಕೊಂಡಗೊಳ, ವಿಮಾನ ನಿಲ್ದಾಣದ ಬಳಿ ಹಾಗು ಐಐಟಿಗೆ ಸ್ವಾಧೀನಪಡಿಸಿ ಕೊಂಡಿರುವ ಭೂಮಿ ಸುತ್ತಮುತ್ತಲಿನ ಖರಾಬು ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಯೆಂದು ಅಕ್ರಮವಾಗಿ ಮಂಜೂರು ಮಾಡಿ ಕೊಂಡು ಭೂ ಮಾಫಿಯಾಗಳು ಕಬಳಿಸುತ್ತಿವೆ. ಕಂದಾಯ ಸಚಿವರು ಪರಿಶೀಲನೆ ನಡೆಸಲಿ. ನಾನೇ ಸಚಿವರಿಗೆ ಪೂರ್ಣ ವಿವರ ಹಾಗು ದಾಖಲೆ ಗಳನ್ನು ನೀಡುವೆ. ಕಂದಾಯ ಸಚಿವರು



ಪ್ರಾಮಾಣಿಕರು, ಶಿಸ್ತಿನವರು ಎಂದು ಹೇಳಲಾಗುತ್ತಿದೆ. ಅವರು ಈ ಬಗ್ಗೆ ವಿಶೇಷ ತನಿಖಾದಳದಿಂದ ತನಿಖೆ ನಡೆಸಲಿ. ಬಡ ರೈತರು ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಮಂಜೂರು ಮಾಡಿಕೊಡಲಿ. ಆದರೆ ಭೂ ಮಾಫಿಯಾದವರು ಕಬಳಿ ಸುವ ಹುನ್ನಾರವನ್ನು ತಡೆಯಬೇಕು. ಅಧಿಕಾರಿಗಳೇ ಸರ್ಕಾರಿ ಭೂಮಿ, ಖರಾಬು ಭೂಮಿ ಯನ್ನು ಭೂ ಮಾಫಿಯಾದವರಿಗೆ ಹುಡುಕಿಕೊಟ್ಟು ಅವರಿಂದ ಲಕ್ಷಾಂತರ ರೂ. ಪಡೆಯುವುದು ಇಲ್ಲವೇ ಬೇನಾಮಿ ಆಸ್ತಿ ಮಾಡಿಕೊಳ್ಳುತ್ತಿದ್ದಾರೆ ಎಂದು ರೇವಣ್ಣ ಅವರು ಆರೋಪಿಸಿದರು.

ಕಿತ್ತನಕೆರೆ ಗ್ರಾಮದ ರಾಮೇಗೌಡ ಎಂಬವರಿಗೆ ಬಹಳ ಹಿಂದೆಯೇ ಗೋಮಾಳ ಭೂಮಿ ಬಗರ್ ಹುಕುಂ ಸಾಗುವಳಿಯಲ್ಲಿ 4 ಎಕರೆ 36 ಗುಂಟೆ ಜಮೀನು ಮಂಜೂರಾಗಿತ್ತು. ರಾಮೇಗೌಡ ಅವರು 2008ರಲ್ಲಿ ನಿಧನರಾಗಿದ್ದು, ಅವರ ಪತ್ನಿ ದ್ಯಾವಮ್ಮ ಪೌತಿ ಖಾತೆಗೆ ಅರ್ಜಿ ಸಲ್ಲಿಸಿದರೆ

### ಪೌತಿ ಖಾತೆ ಮಾಡದೆ ಅನ್ಯಾಯ

ದುದ್ದ ಹೋಬಳಿ ಕಿತ್ತನೆಕೆರೆ ಗ್ರಾಮದಲ್ಲಿ ಬಗರ್ ಹುಕುಂ ಸಾಗುವಳಿಯಲ್ಲಿ ಮಂಜೂರಾದ 4 ಎಕರೆ 36 ಗುಂಟೆ ಜಮೀನನ್ನು ವೃದ್ಧೆಗೆ ಪೌತಿ ಖಾತೆ ಮಾಡಿಕೊಡದೆ ಕಂದಾಯ ನಿರೀಕ್ಷಕರು ಹಾಗು ತಹಶೀಲ್ದಾರ್ ಭೂ ಮಾಫಿಯಾದವರೊಂದಿಗೆ ಕಬಳಿಸುವ ಹುನ್ನಾರ ನಡೆಸಿದ್ದಾರೆಂದು ರೇವಣ್ಣ ಆರೋಪಿಸಿದರು.

ಖಾತೆ ಮಾಡಿಕೊಡದೆ ಉದ್ದೇಶಪೂರ್ವಕವಾಗಿ ಕಂದಾಯ ನಿರೀಕ್ಷಕರು ಬೇರೊಬ್ಬ ರಿಂದ ತಕರಾರು ಅರ್ಜಿ ಪಡೆದುಕೊಂಡು ಆ ಭೂಮಿಯನ್ನು ಕಬಳಿಸಲು ಹುನ್ನಾರ ನಡೆಸಿದ್ದಾರೆ. ಇನ್ನು 10 ದಿನಗಳೊಳಗೆ ದ್ಯಾವಮ್ಮ ಅವರಿಗೆ ಪೌತಿ ಖಾತೆ ಮಾಡಿಕೊಡದಿದ್ದರೆ ಎಲ್ಲಾ ಜೆಡಿಎಸ್ ಶಾಸಕರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಬಳಿ ಕಾರ್ಯಕರ್ತರ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

# ಶಾಸಕರಿಂದ ಕಾಮಗಾರಿ ಗುಣಮಟ್ಟ ವೀಕ್ಷಣೆ



• ಪ್ರಜೋದಯ ವರದಿ

**ಹಾಸನ:** ಹಾಸನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲಸಿನಹಳ್ಳಿ ಗ್ರಾಮದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ನಡೆಯುತ್ತಿರುವ ಕಾಂಕ್ರಿಟ್ ರಸ್ತೆ ಕಾಮಗಾರಿ ಗುಣಮಟ್ಟವನ್ನು ಶಾಸಕ ಹೆಚ್.ಪಿ. ಸ್ವರೂಪ್ ಅವರು ಸೋಮವಾರ ವೀಕ್ಷಣೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕರ ಅನು ಕೂಲಕ್ಕೆ ನಡೆಯುತ್ತಿರುವ ರಸ್ತೆ ಕಾಮಗಾರಿ ಗುಣಮಟ್ಟದಿಂದ ನಡೆಸುವ ಜೊತೆಗೆ ಶೀಘ್ರವಾಗಿ ಕಾಮಗಾರಿಯನ್ನು ಪುರ್ಣ ಗೊಳಿಸಿ, ಗ್ರಾಮಸ್ಥರ ಸಂಚಾರಕ್ಕೆ ಅನುಕೂಲ ಮಾಡಿ ಕೊಡ ಬೇಕೆಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಹಾಗು ಗುತ್ತಿಗೆದಾರರಿಗೆ ಸೂಚಿಸಿದರು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ಜೆಡಿಎಸ್ ಮುಖಂಡರು, ಗ್ರಾಮದ ಮುಖಂಡರು ಹಾಜರಿದ್ದರು.

# ಗುಡುಗಿದ ಕಾಂಗ್ರೆಸ್ ಮುಖಂಡರು

» ಮೊದಲನೇ ಪುಟದಿಂದ

ಐದು ಗ್ಯಾರಂಟಿ ಕೊಟ್ಟಿಟ್ದಿದ್ದೀವಿ ಏನೂ ಆಗಲ್ಲ ಅನ್ಕೊಂಡಿದ್ದಾರೆ. ಯೋಜನೆಯ ಲಾಭವನ್ನು ಮೂರು ಪಕ್ಷದವರು ಪಡೆಯುತ್ತಿದ್ದಾರೆ. ಕೇವಲ ಕಾಂಗ್ರೆಸ್ ಕಾರ್ಯಕರ್ತರಷ್ಟೇ ಫಲಾ ನುಭವಿಗಳಲ್ಲ. ಗ್ಯಾರಂಟಿ ಹೆಸರಿನಲ್ಲಿ ಚುನಾವಣೆ ಗೆಲ್ತೇವೆಂಬ ಮನಸ್ಥಿತಿಯಿಂದ ಹೊರ ಬನ್ನಿ. ಕಾರ್ಯಕರ್ತರು ಕೆಲಸ ಮಾಡಿದ ರಷ್ಟೇ ಗೆಲುವು. ಎಲ್ಲೆಲ್ಲಿ ಕಾರ್ಯ ಕರ್ತರಿಗೆ ಮುಖಂಡರು ಬೇಸರವಾಗಿ ದ್ದಾರೆ ಅಲ್ಲೆಲ್ಲಾ ಕಾಂಗ್ರೆಸ್ ಸೋತಿದೆ. ಐದ್ ಗ್ಯಾರಂಟಿ ಇವರ್ ಮನೆ ಹಾಳಾ ಗೋಗ ಅದ್ಯಾವ್ ಗ್ಯಾರಂಟಿನೋ ಏನೋ, ಪಕ್ಷದ ಮುಖಂಡರನ್ನೆಲ್ಲಾ ತಿಂದು ಹಾಕಿವೆ. ಕಾರ್ಯಕರ್ತರ ನೆರವಿನಿಂದ ಗೆದ್ದ ಶ್ರೇಯಸ್ ಪಟೇಲ್ ಕೃತಜ್ಞತಾ ಕಾರ್ಯ ಕ್ರಮ ಆಯೋಜಿಸಲಿಲ್ಲ. ಸಮಾ ರಂಭಕ್ಕೆ ಬಂದರೆ ಜೈಕಾರ ಸ್ವೀಕರಿಸಿ ತೆರಳುತ್ತಾರೆ ಹೊರತು ಕಾರ್ಯಕರ್ತ ರೊಂದಿಗೆ ನೇರ ಸಂವಾದ ನಡೆಸುವುದಿಲ್ಲವೆಂದು ಅಸಮಾಧಾನ ಹೊರ ಹಾಕಿದರು.

**ಸಂಸದ ಶ್ರೇಯಸ್ ನಡೆಗೆ ಬೇಸರ**

ಯಾವುದೇ ಕ್ಷೇತ್ರಕ್ಕೆ ಹೋದರೂ ಪುಟ್ಟಸ್ವಾಮಿಗೌಡ, ಶ್ರೀಕಂಠಯ್ಯ ಅವರು ಪಕ್ಷದ ಮುಖಂಡರನ್ನು ಕರೆ ಸುತ್ತಿದ್ದರು. ಅವರಿಂದ ಈ ವ್ಯಕ್ತಿ (ಶ್ರೇಯಸ್ ಪಟೇಲ್) ಕಲಿಯು ವುದು ಸಾಕಷ್ಟಿದೆ. ನಾನು ಹೀಗೆ ಮಾತ ನಾಡಿದರೆ ಕೆಲವರು ಬೇಜಾರಾಗು ತ್ತಾರೆ. ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡರನ್ನು ಪ್ರಶ್ನಿಸಿದರೆ ಅವರು ನಾನು ತಾಲ್ಲೂಕಿಗೆ ಮಾತ್ರ ಸೀಮಿತ ಎನ್ನುತ್ತಾರೆ. ಸಂಸದರಾದರೂ ಗಂಭೀರವಾಗಿ ಪರಿಗಣಿಸಬೇಕಲ್ಲವೇ. ನಾನು ಮಾತನಾಡುವುದು ಇನ್ನೂ ಸಾಕಷ್ಟಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ಮಾತನಾಡಿ, ರಾಜಕೀಯ ದಲ್ಲಿ ಎಲ್ಲರಿಗೂ ಅವಮಾನ ಆಗು ತ್ತದೆ. ಎಲ್ಲರೂ ಒಟ್ಟಾಗಿ ನಾಯಕರ ಬಳಿ ಹೋಗೋಣ. ಜಿಲ್ಲೆಯ ಸಮಸ್ಯೆ ಹೇಳಿಕೊಳ್ಳೋಣವೆಂದರು.

ಕಾಂಗ್ರೆಸ್‌ನ ಮಾಜಿ ಜಿಲ್ಲಾಧ್ಯಕ್ಷ ಜಾವಗಲ್ ಮಂಜುನಾಥ್ ಅವರು ಮಾತನಾಡಿ, ಚುನಾವಣೆಯಲ್ಲಿ ಟಿಕೆಟ್ ನೀಡುವಾಗ ಬೇರೆಯವರ ಸಲಹೆ ಪಡೆಯಬೇಕು. ನಾವು ಕೈಗೊ ಳ್ಳುವ ನಿರ್ಣಯವೇ ಸರಿ ಎಂದು ಕೊಂಡರೆ ಪಕ್ಷಕ್ಕೆ ಹೊಡೆತ ಬೀಳುತ್ತದೆ ಎಂದು ಹೇಳಿದರು.

# ಕೆಎಸ್‌ಆರ್‌ಟಿಸಿ ನೌಕರನ ಹತ್ಯೆ: ಆರೋಪಿಗಳ ಬಂಧನಕ್ಕೆ ಆಗ್ರಹ

» ಮೊದಲನೇ ಪುಟದಿಂದ

ಅತ್ಯಂತ ಅಮಾನುಷ ನಡೆದು 15 ದಿನಗಳು ಕಳೆಯುತ್ತಾ ಬಂದರೂ ಈ ಪ್ರಕರಣದ ತನಿಖೆ ನಿಧಾನಗತಿಯ ಲ್ಲಿದೆ. ಹತ್ಯೆಗೈದಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳದಿರುವುದು ಪೊಲೀಸ್ ತನಿಖೆಯ ಮೇಲೆಯೇ ಅನುಮಾನಗಳನ್ನು ಮೂಡಿಸುತ್ತಿದೆ. ಜೊತೆಗೆ ಇದು ಕೃತ್ಯ ನಡೆಸಿದವರು ಕಾನೂನನ್ನೂ ಕಣ್ಮರೆಸಿ ತಪ್ಪಿಸಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆಂದು ಆರೋಪಿಸಿದರು.

ಈ ಹತ್ಯೆ ಪ್ರಕರಣ ಮೇಲ್ನೋಟಕ್ಕೆ ಆಸ್ತಿ ವಿವಾದಕ್ಕೆ ದಾಯಾದಿಗಳು ಹತ್ಯೆ ಮಾಡಿರಬಹುದೆಂದು ಕಂಡರೂ ವೀರಪ್ಪ ಅವರನ್ನು ಈ ರೀತಿಯಾಗಿ ಅತ್ಯಂತ ಬರ್ಬರವಾಗಿ ಹತ್ಯೆ ಮಾಡಿ ರುವುದನ್ನು ನೋಡಿದರೆ ಇದೊಂದು ವ್ಯವಸ್ಥಿತ ಪಿತೂರಿ ರೂಪಿಸಿ ಹತ್ಯೆ ಮಾಡಿರುವಂತಿದೆ. ವೀರಪ್ಪ ಅವರ ಹತ್ಯೆಯ ಹಿಂದೆ ಮೇಲ್ಜಾತಿಗೆ ಸೇರಿದ ಹಾಗು ಆರ್ಥಿಕ ಮತ್ತು ರಾಜಕೀಯ ಪ್ರಭಾವ ಹೊಂದಿರುವ ಕಾಣದ ಕೈಗಳು ಸೇರಿ ಅತ್ಯಂತ ವ್ಯವಸ್ಥಿತವಾಗಿ ಸಂಚು ನಡೆಸಿ ಕೃತ್ಯ ನಡೆಸಿರಬಹು ದೆಂಬಂತೆ ಅನುಮಾನವಿದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯು ಸಮಗ್ರ ವಾಗಿ ಎಲ್ಲಾ ಆಯಾಮಗಳಲ್ಲೂ ಅತ್ಯಂತ ತ್ವರಿತಗತಿಯಲ್ಲಿ ತನಿಖೆ ನಡೆಸಬೇಕು. ಸರ್ಕಾರವು ಈ ಪ್ರಕರಣ ವನ್ನು ಉನ್ನತ ಮಟ್ಟದ ತನಿಖೆಗೂ ಶಿಫಾರಸ್ಸು ಮಾಡುವ ಮೂಲಕ ಹತ್ಯೆಗೈ ದವರನ್ನು ಶಿಕ್ಷೆಗೆ ಗುರಿಪಡಿಸಬೇಕು. ವೀರಪ್ಪ ಅವರ ಕುಟುಂಬಕ್ಕೆ ನ್ಯಾಯ ದೊರಕಿಸಲು ತನಿಖೆಯನ್ನು ತೀವ್ರ ಗೊಳಿಸಿ ತಪ್ಪಿತಸ್ಥರನ್ನು ಕೂಡಲೇ ಬಂಧಿ ಸದಿದ್ದಲ್ಲಿ ತೀವ್ರ ಸ್ವರೂಪದ ಪ್ರತಿಭಟನೆ ನಡೆಸಲಾಗು ವುದು ಎಂದು ಎಚ್ಚರಿಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಮಾದಿಗ ದಂಡೋರ ಮುಖಂಡ ಟಿ. ಆರ್.ವಿಜಯ್ ಕುಮಾರ್, ಡಿಎಸ್ ಎಸ್ ಜಿಲ್ಲಾ ಸಂಚಾಲಕ ಎಂ.ಜಿ.ಪೃಥ್ವಿ, ರಾಜ ಶೇಖರ್ ಹುಲಿಕಲ್, ನಾರಾಯಣ ದಾಸ್, ಹೆಚ್ ಆರ್ ನವೀನ್ ಕುಮಾರ್, ಅಂಬುಗ ಮಲ್ಲೇಶ್ ಇದ್ದರು.

# ಒಳ ಮೀಸಲಾತಿ ಅನ್ವಯ ನೇಮಕಾತಿಗೆ ಆಗ್ರಹ



• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಭರ್ತಿಗೆ ಮುಂದಾಗಿರುವ 56,342 ಖಾಲಿ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ.15 ಒಳಮೀಸಲಾತಿಯನ್ನು ಗ್ರೂಪ್ ಎ, ಬಿ, ಸಿ ವರ್ಗೀಕರಣದಂತೆ ಕಡ್ಡಾಯವಾಗಿ ಜಾರಿಗೊಳಿಸ ಬೇಕೆಂದು ಆಗ್ರಹಿಸಿ ಕರ್ನಾಟಕ ಮಾದರ ಮಹಾ ಸಭಾ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧ್ಯಕ್ಷ ಟಿ.ಆರ್.ವಿಜಯ ಕುಮಾರ್ ಮಾತನಾಡಿ, ಒಳ ಮೀಸ ಲಾತಿ ಕುರಿತು ಸುಪ್ರೀಂ ಕೋರ್ಟ್ ನಿರ್ದೇಶನದ ಬಳಿಕ ರಾಜ್ಯ ಸರ್ಕಾರ ಕಾಯ್ದೆ ರೂಪಿಸಿದರೂ, ಇತ್ತೀಚಿನ ಸರ್ಕಾರದ ಆದೇಶಗಳಲ್ಲಿ ಹಳೆಯ ಮೀಸಲಾತಿ ಹಾಗು ರೋಸ್ಟರ್ ಪದ್ಧತಿ ಮುಂದುವರಿಸಿರುವುದು ಒಳ ಮೀಸಲಾತಿ ಆಶಯಕ್ಕೆ ಧಕ್ಕೆಯಾಗುತ್ತಿ ದೆಂದು ಆರೋಪಿಸಿದರು.

ನಿವೃತ್ತ ನ್ಯಾಯಮೂರ್ತಿ ನಾಗ ಮೋಹನ್ ದಾಸ್ ಅವರ ವರದಿ ಆಧಾರದ ಮೇಲೆ ಪರಿಶಿಷ್ಟ ಜಾತಿಗಳನ್ನು ಉಪವರ್ಗೀಕರಿಸಿ ಶೇ.15 ಒಳ ಮೀಸಲಾತಿ ಸ್ಪಷ್ಟವಾಗಿ ಜಾರಿಗೊಳಿಸ ಬೇಕು. ಜೊತೆಗೆ ಶೇ.56 ಮೀಸಲಾತಿ ವ್ಯವಸ್ಥೆಯನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಒಳ ಮೀಸಲಾತಿ ಜಾರಿಗೊಳಿಸದಿ ದ್ದಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಮಹಾಸಭಾದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

# ನಾಳೆಯಿಂದ ಕೋಡಿಮಠದಲ್ಲಿ ಮಹದೇಶ್ವರ ಜಾತ್ರೆ

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿನ ಸುಕ್ಷೇತ್ರ ಹಾರನಹಳ್ಳಿ ಕೋಡಿಮಠದಲ್ಲಿ ಮಾ.4ರಿಂದ 6ರ ವರೆಗೆ ವೈಭವದಿಂದ ನಡೆಯಲಿರುವ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವಕ್ಕೆ ಅಗತ್ಯ ಪೂರ್ವಸಿದ್ಧತೆ ಕೈಗೊಳ್ಳಲಾಗಿದೆ ಎಂದು ಪೀಠಾಧ್ಯಕ್ಷ ಶ್ರೀ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಅವರು ತಿಳಿಸಿದರು.

ಸುಕ್ಷೇತ್ರ ಕೋಡಿಮಠದಲ್ಲಿ ಜಾತ್ರಾಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಶಾಸಕ ಹಾಗು ರಾಜ್ಯ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳಿಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ರಾಜ್ಯದ ವಿವಿಧ ಮಠಾಧೀಶರು, ಪ್ರವಚನಗಾರರು, ವಾಗ್ಮಿಗಳು, ಜನಪ್ರತಿನಿಧಿಗಳು ಮತ್ತು ಮು ಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮಾ.4ರಂದು ಹುಣ್ಣಿಮೆ ಕಟ್ಟಲೆ, ಕೋಡಿಮಠ ಹಾಗು ಮಹದೇಶ್ವರ ಬೆಟ್ಟದಲ್ಲಿ ಷಟ್ಟಳ ಧ್ವಜಾರೋಹಣ, ಬೆಳ್ಳಿ ಸಿಂಹಾಸನ ಹಾಗು ರಜತ ಪಲ್ಲಕ್ಕಿ ಪೂಜೆ ಶಾಸ್ತ್ರೋಕ್ತವಾಗಿ ನಡೆಯಲಿದೆ. 1101 ಮುತ್ತೈದೆಗಳಿಗೆ ಉಡಿ ತುಂಬುವ ಸಂಪ್ರದಾಯಿಕ ಕಾರ್ಯಕ್ರಮವೂ ಜರುಗಲಿದೆ. ಬೆಳಿಗ್ಗೆ 11 ಗಂಟೆಗೆ ಧಾರ್ಮಿಕ ಸಭೆ ಆಯೋಜಿಸಲಾಗಿದೆ. ಮಾ.5ರಂದು ಶ್ರೀಮಠದಲ್ಲಿ ಹೆಚ್.ಎಸ್.ನೀಲಕಂಠಯ್ಯ, ಹೆಚ್.ಎಸ್.ಶಿವಲಿಂಗಮೂರ್ತಿ ಅವರಿಂದ ಪುರಾಣ ಶ್ರವಣ ನಡೆಯಲಿದೆ.

ನಂತರ ಭಕ್ತರ ವಿನಂತಿಯ ಮೇರೆಗೆ ಹಾರನಹಳ್ಳಿ ಗ್ರಾಮ ದಲ್ಲಿ ಪಾದಪೂಜೆ ಸ್ವೀಕರಿಸಿ ಭಿಕ್ಷಾಟನೆ ನಡೆಯಲಿದೆ. ಸಂಜೆ 6 ಗಂಟೆಗೆ ಸೊರಬ ಶ್ರೀಜಡೆ ಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮೀಜಿ ಸಾನ್ನಿಧ್ಯದಲ್ಲಿ ಧಾರ್ಮಿಕ ಸಮಾರಂಭ ಜರುಗಲಿದೆ.

ಮಾ.6ರಂದು ಮುಂಜಾನೆ ಶಿವಲಿಂಗಸ್ವಾಮಿಗಳ ಗದ್ದುಗೆಗೆ ರುದ್ರಾಭಿಷೇಕ ಹಾಗು ಸಹಸ್ರ ಬಿಲ್ವಾರ್ಚನೆ ನಡೆಯಲಿದೆ. ನಂತರ ಜಾನಪದ ಕಲಾತಂಡಗಳೊಂದಿಗೆ ಪಲ್ಲಕ್ಕಿ ಉತ್ಸವ ಹಾರನಹಳ್ಳಿ ಗ್ರಾಮಕ್ಕೆ ಪುರಪ್ರವೇಶ ಮಾಡಲಿದೆ. ಮಧ್ಯಾಹ್ನ ಮಹದೇಶ್ವರ ಬೆಟ್ಟದಲ್ಲಿ ಭಕ್ತರಿಂದ ಗುಗ್ಗಳ ಸೇವೆ, ಹೆಜ್ಜೆ ನಮಸ್ಕಾರ ಹಾಗೂ ದಿಂಡುರುಳು ಸೇವೆ ನೆರವೇರಲಿದೆ. ಸಂಜೆ ವಿವಿಧ ಮಠಾಧೀಶರ ಸಾನಿಧ್ಯದಲ್ಲಿ ಧಾರ್ಮಿಕ ಸಮಾರಂಭ ನಡೆಯಲಿದೆ.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುವ ಸಾವಿರಾರು ಭಕ್ತರಿಗೆ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಶ್ರೀಮಠದ ಉತ್ತರಾಧಿಕಾರಿ ಚೇತನ್ ಮರಿದೇವರು ಉಪಸ್ಥಿತರಿದ್ದರು.

# ಚಿತ್ರಕಲಾ ಸ್ಪರ್ಧೆ: ಮೊಮಲ್ ಆಲಿ ಪ್ರಥಮ



**ಅರೇಹಳ್ಳಿ:** ಪಟ್ಟಣದ ಮಲ್ನಾಡ್ ಶಾಲೆಯ ನಾಲ್ಕನೇ ತರಗತಿ ವಿದ್ಯಾರ್ಥಿನಿ ಮೊಮಲ್ ಆಲಿ ಸಕಲೇಶಪುರ ದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ.

ಸಕಲೇಶಪುರ ಪಟ್ಟಣದ ಕುಶಾಲನಗರದಲ್ಲಿರುವ ಅಂಬೇಡ್ಕರ್ ಸಮುದಾಯ ಭವನದಲ್ಲಿ ಇಮೇಜಿನ್ ಚಿತ್ರಕಲಾ ಶಾಲೆ ವತಿಯಿಂದ ಎಲ್.ಕೆ.ಜಿ. ಯಿಂದ ಪಿ.ಯು.ಸಿ ವರೆಗಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸ ಲಾಗಿದ್ದ 2026-27ನೇ ಸಾಲಿನ 'ಚಿಣ್ಣರ ಚಿತ್ತಾರ' ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾಳೆ.

ಸ್ಪರ್ಧೆಯಲ್ಲಿ ಮಂಗಳೂರು, ಬೀದರ್, ಮೈಸೂರು ಸೇರಿ ವಿವಿಧ ಜಿಲ್ಲೆಗಳಿಂದ ಸುಮಾರು 300ಕ್ಕೂ ಹೆಚ್ಚು ವಿದ್ಯಾರ್ಥಿ ಗಳು ಭಾಗವಹಿಸಿದ್ದರು. 3 ಮತ್ತು 4ನೇ ತರಗತಿ ವಿಭಾಗದಲ್ಲಿ ಒಟ್ಟು 40 ವಿದ್ಯಾರ್ಥಿಗಳು ಸ್ಪರ್ಧಿ ಸಿದ್ದರು. ಅವರಲ್ಲಿ ಅರೇಹಳ್ಳಿ ಪಟ್ಟಣದ ಮಲ್ನಾಡ್ ಶಾಲೆಯ ವಿದ್ಯಾರ್ಥಿನಿ ಮೊಮಲ್ ಆಲಿ ಅವರು ಪರಿಸರ ಸಂರಕ್ಷಣೆ ವಿಷಯದ ಕುರಿತು ಚಿತ್ರ ಬಿಡಿಸುವ ಮೂಲಕ ಪ್ರಥಮ ಸ್ಥಾನ ಗಳಿಸಿದ್ದಾರೆ. ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಪ್ರಶಸ್ತಿ ವಿತರಿಸಿದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಂಚಲಾ ಕುಮಾರಸ್ವಾಮಿ ಅವರು ಹಾಜರಿದ್ದರು.

# ನಗರದಲ್ಲಿ ಯುವ ಉದ್ಯೋಗ ಮೇಳ


» ಮೊದಲನೇ ಪುಟದಿಂದ

ಬಗೆಹರಿದಿಲ್ಲ. ಉಪವಿಭಾಗಾಧಿ ಕಾರಿ, ತಹಶೀಲ್ದಾರ್ ಅವರು ಸೋಮ ವಾರ ಸ್ಥಳೀಯ ಜನಪ್ರತಿನಿಧಿಗಳು ಹಾಗು ಭಕ್ತರೊಂದಿಗೆ ಶಾಂತಿ ಸಭೆ ನಡೆಸಿದ್ದಾರೆ. ಶಾಂತಿಯುತ ಜಾತ್ರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಸಹ ಗೊಂದಲಕ್ಕೆ ಎಡೆ ಮಾಡಿಕೊಡಬಾರದೆಂದರು.

**ಭೂಸ್ವಾಧೀನ ಪ್ರಕ್ರಿಯೆ ಪೂರ್ಣ**

ಹಾಸನ-ಚಿಕ್ಕಮಗಳೂರು ರೈಲ್ವೆ ಹಳಿ ನಿರ್ಮಾಣ ಕಾಮಗಾರಿ ಸಂಬಂಧ ಇದ್ದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣ ಗೊಂಡಿದ್ದು, ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಜಿಲ್ಲೆಗೆ ಭೇಟಿ ನೀಡಿದಾಗ ಸಭೆ ನಡೆಸಿ ದ್ದರು. ಜಿಲ್ಲಾಡಳಿತ ತನ್ನ ಜವಾಬ್ದಾರಿ ಯನ್ನು ನಿಬಾಯಿಸಿದೆ ಎಂದು ಹೇಳಿದರು.

ಹಾಸನ-ಬೇಲೂರು ಚತುಷ್ಪಥ ರಸ್ತೆ ನಿರ್ಮಾಣ ಸಂಬಂಧ ಕೆಲಸಗ ಳಾಗಬೇಕಿದೆ. ಎಸ್‌ಎಲ್‌ಒ (ರಾಜ್ಯ ಸಂಪರ್ಕಾಧಿಕಾರಿ), ಆರ್‌ಒ (ವಲಯ ಅಧಿಕಾರಿ) ಕಚೇರಿ ಬೆಂಗಳೂರಿನಲ್ಲಿ ರುವುದರಿಂದ ಸ್ಥಳೀಯ ರೈತರು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಜಿಲ್ಲಾ ಕೇಂದ್ರದಲ್ಲಿ ಎಸ್‌ಎಲ್‌ಒ, ಆರ್‌ಒಗಳಿಗೆ ಅನುಕೂಲವಾಗುತ್ತದೆ. ಶೀಘ್ರ ಸಭೆ ನಡೆಸಿ ಸ್ಪಷ್ಟ ನಿರ್ಧಾರಕ್ಕೆ ಬರಲಾಗುವುದೆಂದು ತಿಳಿಸಿದರು.



**ಅರಕಲಗೂಡು ತಾಲ್ಲೂಕಿನ ನೆಹರು ನಗರ ಗ್ರಾಮದಲ್ಲಿ ಗಣಿಗಾರಿಕೆಯ ಧೂಳಿ ನಿಂದಾಗಿ ಮಕ್ಕಳು ಶಾಲೆ ಬಿಟ್ಟಿದ್ದಾರೆಂಬ ಮಾಹಿತಿ ಇದ್ದು, ತಹಶೀಲ್ದಾರ್ ಸಭೆ ನಡೆಸಿ ಪೋಷಕರ ಮನವೊಲಿಸುವ ಪ್ರಯತ್ನ ಮಾಡಿ ದ್ದಾರೆ. ಈಗಲೂ ಸಮಸ್ಯೆ ಜೀವಂತ ವಾಗಿದ್ದರೆ ಕಾನೂನು ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.**

**-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಸದ ಶ್ರೇಯಸ್ ಎಂ.ಪಟೇಲ್

# ಕಾಂಗ್ರೆಸ್‌ಗೆ ಕೂಲಿ ಕೊಡಲು ಜನತೆ ಮುಂದಾಗಬೇಕು

• ಪ್ರಜೋದಯ ವರದಿ

ಹೊಳೆನರಸೀಪುರ: ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವ ಪ್ರಣಾಳಿಕೆಯಂತೆ ರಾಜ್ಯದಲ್ಲಿ ಯಶಸ್ವಿ ಯಾಗಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಪಡಿಸಿದೆ. ಅದಕ್ಕೆ 2028ರ ವಿಧಾನ ಸಭಾ ಚುನಾವಣೆಯಲ್ಲಿ ಕೂಲಿ ಕೊಡಲು ಜನತೆ ಮುಂದಾಗ ಬೇಕೆಂದು ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಕೋರಿದರು.

ಪಟ್ಟಣದಲ್ಲಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾ ಡಿದ ಅವರು, ಗೃಹಲಕ್ಷ್ಮಿ ಯೋಜನೆ ಯಡಿ ತಾಲ್ಲೂಕಿನ 47 ಸಾವಿರ ಮಹಿಳೆಯರು ಫಲಾನುಕೂಲತೆ ಪಡೆದುಕೊಳ್ಳುತ್ತಿದ್ದಾರೆ. ಈ ವರೆಗೆ 230 ಕೋಟಿ ರೂ. ನೇರವಾಗಿ, ಭ್ರಷ್ಟಾ ಚಾರಕ್ಕೆ ಹಸ್ತಕ್ಷೇಪ ಇಲ್ಲದೆ ಫಲಾನು ಭವಿ ಮಹಿಳೆಯರ ಖಾತೆಗೆ ಸೇರಿದೆ. ತಾಂತ್ರಿಕ ದೋಷದಿಂದ ಕೆಲವೊಮ್ಮೆ ತಡವಾಗಿರಬಹುದು. ಆದಕ್ಕೆ ಆತಂಕ




ಬೇಡ. ಶಕ್ತಿ ಯೋಜನೆಯಡಿ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ 30 ಲಕ್ಷಕ್ಕೂ ಹೆಚ್ಚು ಜನರು ಪ್ರಯಾಣ ಮಾಡಿದ್ದಾರೆ ಎಂದರು.

56 ಸಾವಿರ ಕೋಟಿ ರೂ.ಗಳನ್ನು ರಾಜ್ಯದಲ್ಲಿ ವರ್ಷಕ್ಕೆ ಪಂಚ ಗ್ಯಾರಂಟಿ ಯೋಜನೆಗೆ ವೆಚ್ಚ ಮಾಡಿದೆ. 10 ಕಿ. ಲೋ. ಅಕ್ಕಿ ಉಚಿತವಾಗಿ ನೀಡುತ್ತಿದೆ. ಯಾವುದೋ ಸಾಲ ಪಡೆಯಲು ಹೆಚ್ಚಿನ ಆದಾಯ ತೋರಿಸಿ ಅರ್ಜಿ ಹಾಕಿದ್ದವರ ಮಾನದಂಡ ಅನುಸರಿಸಿ ಬಿಪಿಎಲ್‌ನಿಂದ ಎಪಿಎಲ್‌ಗೆ ಪಡಿತರ ಚೀಟಿ ಬಂದಿದೆ. ಈ ಬಗ್ಗೆ ಹಲವು ಗೊಂದಲ ಇದೆ. ಅಂತಹವರು ನಿಜ ವಾಗಿಯೂ ಬಡವರಿರುತ್ತಾರೆ. ಅಧಿ ಕಾರಿಗಳು ಸಮಸ್ಯೆಗಳನ್ನು ಪರಿಹರಿ ಸಲು ಉಪಾಯ ಕಂಡುಕೊಳ್ಳಬೇಕು. ಈ ಬಗ್ಗೆ ಪರಿಶೀಲಿಸಿ ಮಾರ್ಪಾಟು ಮಾಡಲಾಗುವುದು. ಬಿಪಿಎಲ್ ವಂಚಿತ ಬಡವರಿಗೆ ಮರು ಬಿಪಿಎಲ್ ಪಡಿತರ ಹೊಂದಲು ಅನುಕೂಲತೆ ಮಾಡಲಾಗುತ್ತದೆ. ವಿದ್ಯಾನಿಧಿ ಯೋಜನೆ ಸ್ವಲ್ಪ ತೊಡಕಿದೆ, ಸ್ಪಷ್ಟ ಪ್ರಚಾರ ಇಲ್ಲ, ಯುವಕರು ಅದರ ಸಂಪೂರ್ಣ ಪ್ರಯೋಜನ ಹೊಂದಲು ಕಾರ್ಯರೂಪಿಸ ಬೇಕೆಂದರು.

ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಪ್ರಸನ್ನ ಕುಮಾರ್, ತಾಲ್ಲೂಕು ಪಂಚಾಯಿತಿ ಇಒ ಮುನಿರಾಜ್, ಯೋಜನಾ ನಿರ್ದೇಶಕ ಗೋಪಾಲ್, ಸಿಡಿಪಿಒ ಸುರೇಶ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶೃತಿ, ಮುಖಂಡ ಬಾಗೀವಾಳು ಮಂಜುನಾಥ್, ಇಲಾಖೆ ಅಧಿಕಾರಿಗಳು, ಫಲಾನುಭವಿಗಳು ಹಾಗೂ ಅಂಗನವಾಡಿ ಕಾರ್ಯ ಕರ್ತೆಯರು ಹಾಜರಿದ್ದರು.

# ಖಮೇನಿ ಪತ್ನಿ ಮನ್ಸೌರೆ ಖೋಜಾಸೆ ಸಾವು

• ಪ್ರಜೋದಯ ವರದಿ



**ಟೆಹರಾನ್:** ಇರಾನ್‌ನ ದಿವಂಗತ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಪತ್ನಿ ಮನ್ಸೌರೆ ಖೋಜಾಸ್ತೆ ಬಾಗರ್ಜಾಡೆ (79) ಅವರು ಸೋಮವಾರ ನಿಧನರಾಗಿದ್ದಾರೆ.

ಟೆಹರಾನ್ ಮೇಲೆ ಅಮೇರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ವೈಮಾನಿಕ ದಾಳಿಯಲ್ಲಿ ಮನ್ಸೌರೆ ಅವರು ಗಂಭೀರ ವಾಗಿ ಗಾಯಗೊಂಡಿದ್ದರು. ಕೋಮಾ ದಲ್ಲಿದ್ದ ಅವರು ಚಿಕಿತ್ಸೆ ಫಲಕಾರಿಯಾ ಗದೆ ಕೊನೆಯುಸಿರೆಳೆದಿದ್ದಾರೆಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಅಮೇರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯ ಸಮಯದಲ್ಲಿ ಖಮೇನಿ ಅವರೊಂದಿಗೆ ಮನ್ಸೌರೆ ಇದ್ದರು ಎನ್ನಲಾಗಿದೆ.

# ಎಸ್.ಕೆ.ಕರೀಂ ಖಾನ್-ಅಮೃತ ಕಾವ್ಯ ಪ್ರಶಸ್ತಿ ಪ್ರದಾನ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ರಕ್ಷಿದಿಯ ಪೂರ್ಣಚಂದ್ರ ತೇಜಸ್ವಿ ಸಾಂಸ್ಕೃತಿಕ ಕೇಂದ್ರದಲ್ಲಿ ಬೆಳ್ಳೇಕೆರೆ ಜೈ ಕರ್ನಾಟಕ ಸಂಘದಿಂದ ಎಸ್.ಕೆ.ಕರೀಂ ಖಾನ್ ಸೌಹಾರ್ದ ಪ್ರಶಸ್ತಿ ಹಾಗು ಅಮೃತ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ ನೆರವೇರಿತು.

ರಂಗಕರ್ಮಿ ಪ್ರಸಾದ್ ರಕ್ಷಿದಿ ಅವರು ಮಾತನಾಡಿ, ಬೆಳ್ಳೇಕೆರೆ ಜೈ ಕರ್ನಾಟಕ ಸಂಘ ಕಳೆದ 47 ವರ್ಷ ಗಳಿಂದ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹಲವು ಕಾರ್ಯಕ್ರಮ ಮಾಡುತ್ತಿದೆ. ಕಲೆ, ಸಾಹಿತ್ಯ, ರಂಗಭೂಮಿ, ಸಾಕ್ಷರತೆ, ಆರೋಗ್ಯ, ಕೃಷಿ ಮತ್ತು ಪರಿಸರ ಸಂರಕ್ಷಣೆಯಂತಹ ಜನಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿ ರುವುದು ಹೆಮ್ಮೆಯ ವಿಚಾರವೆಂದರು.

ಸಕಲೇಶಪುರದ ಹೆಮ್ಮೆಯ ಜಾನ ಪದ ಜಂಗಮ ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರದ ವಿಶಿಷ್ಟ ಸಾಧಕ ಎಸ್. ಕೆ.ಕರೀಂಖಾನ್ ಅವರ ಹೆಸರಿನಲ್ಲಿ ಸ್ಥಾಪಿಸಲಾದ ಸೌಹಾರ್ದ ಪ್ರಶಸ್ತಿ ಸಮಾಜದಲ್ಲಿ ಸಾಂಸ್ಕೃತಿಕ ಏಕತೆ ಯನ್ನು ಬಲಪಡಿಸುವ ಪ್ರಯತ್ನವಾಗಿ ದೆಯೆಂದರು.



ಈ ಸಾಲಿನ ಎಸ್.ಕೆ.ಕರೀಂಖಾನ್ ಸೌಹಾರ್ದ ಪ್ರಶಸ್ತಿಯನ್ನು ಕೋಲಾರ ಜಿಲ್ಲೆಯ ಅಚ್ಯುತ ಕೆ.ಜಿ.ಎಫ್. ಅವರಿಗೆ ಪ್ರದಾನ ಮಾಡಲಾಯಿತು. ಅಮೃತಾ ರಕ್ಷಿದಿ ಅವರ ಸ್ಮರಣಾರ್ಥ ನೀಡ ಲಾಗುವ ಅಮೃತ ಕಾವ್ಯ ಪ್ರಶಸ್ತಿಯನ್ನು ಹಾವೇರಿ ಜಿಲ್ಲೆಯ ಮಧು ಕಾರಗಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿನಯ್ ಗುಂಟೆ ಅವರಿಗೆ ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಯಾಮನಹಳ್ಳಿ ಪಂಚಾಯಿತಿ ಅಧ್ಯಕ್ಷ ಎಂ.ಜೆ.ಮಲ್ಲೇಶ್ ವಹಿಸಿದ್ದರು. ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್, ರಂಗ ನಿರ್ದೇಶಕ ಹೆಗ್ಗೋಡು, ಮಾಜಿ ಪ್ರಾಂಶುಪಾಲ ಕೆ.ಜಿ.ಮಹಾ ಬಲೇಶ್ವರ್, ಕೆ.ಎಂ.ಸಿ. ಮಣಿಪಾಲದ ವಾಕ್ ಶ್ರವಣ ತಜ್ಞ ಡಾ|| ಕಿಶನ್, ಉದ್ಯಮಿಗಳಾದ ಕೆ.ಎಸ್.ಪವನ್ ಕುಮಾರ್, ಸೋಮಣ್ಣ ಉಪಸ್ಥಿತರಿದ್ದರು.

ಕವಿ ಸುಬ್ಬು ಹೊಲೆಯಾರ್ ಪ್ರಾಸ್ತಾ ವಿಕವಾಗಿ ಮಾತನಾಡಿದರು. ಕವಿತಾ ಸುಬ್ಬಯ್ಯ, ಮಾಲಿನಿ ವಿಶ್ವನಾಥ್, ಪತ್ರಕರ್ತ ಹೆತ್ತೂರು ನಾಗರಾಜ್, ಸತೀಶ್ ಬೆಳ್ಳೇಕೆರೆ, ಕೆ.ಎಸ್.ರಾಜ ಶೇಖರ್, ಎಸ್.ಕೆ.ಕರೀಂ ಖಾನ್ ಕುಟುಂಬದ ತೌಫಿಕ್ ಅಹಮದ್, ತನ್ವಿರ್ ಅಹಮದ್ ಇತರರು ಉಪಸ್ಥಿತರಿದ್ದರು.

# ಖಮೇನಿ ಹತ್ಯೆಗೆ ಪ್ರತೀಕಾರ

» ಮೊದಲನೇ ಪುಟದಿಂದ

ನಲ್ಲಿರುವ ಬ್ರಿಟನ್ ನೆಲೆಯ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿ ಮಹಾ ಎಡವಟ್ಟು ಮಾಡಿಕೊಂಡಿದೆ. ದಾಳಿ ಮಾಡಿದ ನಂತರ ಗ್ರೀಸ್ ಯಾವುದೇ ಸಂಭಾವ್ಯ ದಾಳಿಗಳಿಂದ ಸೈಪ್ರಸ್ ಅನ್ನು ರಕ್ಷಿಸಲು ಸಿದ್ಧವಾಗಿದೆ ಎಂದು ಗ್ರೀಕ್ ರಕ್ಷಣಾ ಸಚಿವ ನಿಕೋಸ್ ಡೆಂಡಿಯಾಸ್ ಹೇಳಿದ್ದಾರೆ. ಯುಕೆಯ ಆರ್‌ಎಎಫ್ ಅಕ್ರೋತಿರಿ ವಾಯುನೆಲೆಯನ್ನು ಗುರಿಯಾಗಿಸಿಕೊಂಡಿದ್ದ ಎರಡು ಡ್ರೋನ್ ಗಳನ್ನು ಸೈಪ್ರಸ್ ವಾಯುಪ್ರದೇಶದಲ್ಲಿ ಹೊಡೆದುರುಳಿಸಲಾಯಿತು. ನಂತರ ದಾಳಿಗಳನ್ನು ಹಿಮ್ಮೆಟ್ಟಿಸಲು ಗ್ರೀಸ್ ಎರಡು ಫ್ರಿಗೇಟ್‌ಗಳು ಮತ್ತು ಎರಡು ಎಫ್ -16 ಜೆಟ್‌ಗಳನ್ನು ಸೈಪ್ರಸ್‌ಗೆ ಕಳುಹಿಸುತ್ತಿರುವುದಾಗಿ ಘೋಷಿಸಿದೆ.

## ರಾಜಕೀಯ ಸ್ವರೂಪ ಪಡೆದ ರಥದ ಅಲಂಕಾರ ಬಟ್ಟೆ ವಿಚಾರ

» ಮೊದಲನೇ ಪುಟದಿಂದ

**ನಾನು ದೇಣಿಗೆ ಕೊಟ್ಟ ಬಳಿಕ ಸಮಸ್ಯೆ**

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ರಥೋತ್ಸವ ಸಂಬಂಧ ಜಿಲ್ಲಾಡಳಿತ ಕೈಗೊಳ್ಳುವ ನಿರ್ಣಯಕ್ಕೆ ನನ್ನ ಸಹಮತವಿದೆ. ರಥಕ್ಕೆ ತೊಡಿಸುವ ಹೊಸ ಬಟ್ಟೆಗೆ ನಾನು ದೇಣಿಗೆ ನೀಡಿದ ನಂತರ ಸಮಸ್ಯೆ ಉಲ್ಬಣವಾಗಿದೆ. ನಾನು ನೀಡಿದ ದೇಣಿಗೆ ವಾಪಾಸ್ ಕೊಡಿ, ರಥೋತ್ಸವಕ್ಕೆ ಸಮಸ್ಯೆಯಾಗದಂತೆ ಜಾತ್ರೆ ಮಾಡೋಣವೆಂದರು.

ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳು ಸು ಸೂತ್ರವಾಗಿ ನಡೆಯಬೇಕೆನ್ನು ವುದು ನಮ್ಮ ಉದ್ದೇಶ. ಎಲ್ಲರೂ ಸಹಕರಿಸ ಬೇಕೆಂದು ಮನವಿ ಮಾಡಿದರು.

ಡಿವೈಎಸ್‌ಪಿ ಮಹಮದ್ ಹಸ್ಮತ್ ಖಾನ್ ಅವರು ಮಾತನಾಡಿ, ಮೇಲಾ ಧಿಕಾರಿಗಳ ಸೂಚನೆಯಂತೆ ಕಾನೂನು ಸುವ್ಯವಸ್ಥೆ ಕಾಪಾಡಲಾಗುವುದು. ಸಾರ್ವಜನಿಕರು ಅಹಿತಕರ ಘಟನೆಗೆ ಅವಕಾಶ ಮಾಡಿಕೊಡಬಾರದೆಂದರು. ಸೋಮವಾರ ಬೆಳಿಗ್ಗೆಯಿಂದ ಸಂಜೆ ವರೆಗೂ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಜೆಡಿಎಸ್ ಹಾಗು ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿ ದ್ದರಿಂದ ಪೊಲೀಸ್ ಬಿಗಿ ಭದ್ರತೆ ವಹಿಸಲಾಗಿತ್ತು.

# ಸರಾಸರಿ ಬೆಲೆಗೆ ತಂಬಾಕು ಖರೀದಿಸಿ: ಹೆಚ್.ಡಿ.ಕೆ.

• ಪ್ರಜೋದಯ ವರದಿ

**ಮೈಸೂರು:** ರಾಜ್ಯದ ತಂಬಾಕು ಮಾರುಕಟ್ಟೆಗಳಲ್ಲಿ ರೈತರಿಂದ ಹಿಂದಿನ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಉತ್ಪನ್ನ ಖರೀದಿಸಬೇಕು. ತಂಬಾಕು ಮಂಡಳಿಯು ಹರಾಜು ಪ್ರಕ್ರಿಯೆ ಮೇಲೆ ನಿಗಾ ವಹಿಸ ಬೇಕೆಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸೂಚಿಸಿದರು.

ಕೇಂದ್ರ ತಂಬಾಕು ಮಂಡಳಿಯು ಸೋಮವಾರ ಆಯೋಜಿಸಿದ್ದ ಜನ ಪ್ರತಿನಿಧಿಗಳು ಹಾಗೂ ಪ್ರಮುಖ ವರ್ತಕರೊಂದಿಗಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಂಬಾಕು ಉತ್ಪನ್ನಗಳಿಗೆ ವಿಧಿಸಲಾ ಗುತ್ತಿರುವ ತೆರಿಗೆ ಕುರಿತು ದೂರುಗಳಿ ದ್ದಲ್ಲಿ ಅದನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರೆ ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತಂದು ಪರಿಹಾರಕ್ಕೆ ಪ್ರಯತ್ನಿಸಲಾಗುವುದು. ಆದರೆ, ತೆರಿಗೆ ನೆಪದಲ್ಲಿ ರೈತರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಿ ಎಂದರು.

ಐಟಿಸಿ ಕಂಪನಿಯ ಹಿರಿಯ ಅಧಿಕಾರಿ ರವಿ ಮಾತನಾಡಿ, ತಂಬಾಕು



ಉತ್ಪನ್ನಗಳಿಗೆ ವಿಧಿಸುತ್ತಿದ್ದ ಜಿಎಸ್ ಟಿಯನ್ನು ಕೇಂದ್ರವು ಶೇ.18ರಿಂದ ಶೇ.40ಕ್ಕೆ ಏರಿಸಿದೆ. ಸಿಗರೇಟುಗಳ ಮೇಲಿನ ತೆರಿಗೆಯು ದುಪ್ಪಟ್ಟಾಗಿದ್ದು, ಪ್ರತಿ ಸಿಗರೇಟಿನ ಬೆಲೆ 6-7 ಜಾಸ್ತಿ ಆಗಿದೆ. ಹೀಗಾಗಿ ಉತ್ಪನ್ನಗಳಿಗೆ ಬೇಡಿ ಕೆ ಕುಸಿಯುತ್ತಿದ್ದು, ನಾವು ನಿಗದಿತ ಪ್ರಮಾಣಕ್ಕಿಂತ ಕಡಿಮೆ ತಂಬಾಕನ್ನು ಕೊಳ್ಳುವುದು ಅನಿವಾರ್ಯವಾಗಿದೆ. ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ ಎಂದರು.

ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾತನಾಡಿ, ರಾಜ್ಯದಲ್ಲಿ ಈ ವರ್ಷ 8.5 ಕೋಟಿ ಕೆ.ಜಿ.ಯಷ್ಟು ತಂಬಾಕು ಬೆಳೆದಿದ್ದು, ಅದರಲ್ಲಿ 4 ಕೋಟಿ ಕೆ.ಜಿ.ಯಷ್ಟು ಉತ್ಪನ್ನ ಈಗಾಗಲೇ ಕಡಿಮೆ ಬೆಲೆಗೆ ಹರಾಜಾಗಿದೆ. ಉಳಿದ ಉತ್ಪನ್ನ ವನ್ನು ಹರಾಜು ಆರಂಭವಾದ ದಿನದ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಖರೀದಿಸಿ ಎಂದು ಐಟಿಸಿ ಕಂಪನಿ ಪ್ರತಿನಿಧಿಗಳಿಗೆ ಹೇಳಿದರು.

**ಎಫ್‌ಡಿಐಗೆ ಒಲವು**

ಮೈಸೂರು ಜಿಲ್ಲೆಯ ಮಾರುಕಟ್ಟೆ ಗಳಲ್ಲಿ ಐಟಿಸಿ ಕಂಪನಿಯು ಏಕಸ್ವಾಮ್ಯ ಸಾಧಿಸಿದ್ದು, ಅದರಿಂದ ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ತಂಬಾಕಿಗೆ ಸ್ಪರ್ಧಾತ್ಮಕ ದರ ಒದಗಿ ಸುವ ಸಲುವಾಗಿ ಎಫ್‌ಡಿಐ ಮೂಲಕ ವಿದೇಶಿ ಕಂಪನಿಗಳೂ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕೆಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಒತ್ತಾಯಿಸಿದರು.

ಸಭೆಯಲ್ಲಿದ್ದ ಇತರ ಜನಪ್ರತಿನಿಧಿ ಗಳೂ ಅದಕ್ಕೆ ಸಹಮತ ಸೂಚಿಸಿದರು. ಈ ಬಗ್ಗೆ ಪರಿಶೀಲಿಸಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ ತಂಬಾಕು ಮಂಡಳಿ ಅಧಿಕಾರಿಗಳು ಭರವಸೆ ನೀಡಿದರು.

ಚಾಮರಾಜನಗರ ಸಂಸದ ಸುನಿಲ್ ಬೋಸ್, ಶಾಸಕರಾದ ಎ.ಮಂಜು, ಜಿ.ಡಿ.ಹರೀಶ್ ಗೌಡ, ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ ಪಾಲ್ಗೊಂಡರು.

# ರೈಲಿನಲ್ಲಿ ಅಸಭ್ಯ ವರ್ತನೆ: ಪುಂಡರಿಗೆ ಧರ್ಮದೇಟು

• ಪ್ರಜೋದಯ ವರದಿ

**ಹಾಸನ:** ರೈಲಿನಲ್ಲಿ ಅಸಭ್ಯವಾಗಿ ವರ್ತಿ ಸುತ್ತಿದ್ದ ಪುಂಡರಿಗೆ ಪ್ರಯಾಣಿಕರೇ ಧರ್ಮದೇಟು ನೀಡಿದ್ದು, ಪೊಲೀಸರಿಗೆ ಒಪ್ಪಿಸುವಷ್ಟರಲ್ಲಿ ಪರಾರಿ ಯಾಗಿದ್ದಾರೆ.

ಸೋಮವಾರ ಮಧ್ಯಾಹ್ನ ಅರಸೀ ಕೆರೆಯಿಂದ ಹೊರಟ ಹಾಸನ-ಮೈಸೂರು ಎಕ್ಸ್‌ಪ್ರೆಸ್ (ರೈಲು ಸಂಖ್ಯೆ: 16226) ರೈಲಿನಲ್ಲಿ ಹತ್ತಿಕೊಂಡ ಮೂವರು ಯುವಕರು ಮದ್ಯದ ಅಮಲಿ ನಲ್ಲಿದ್ದರು. ರೈಲು ಅರಸೀಕೆರೆಯಿಂದ ಹೊರಡುತ್ತಿದ್ದಂತೆ ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುವುದು, ಅವಾಚ್ಯ ಶಬ್ದಗಳನ್ನು ಬಳಸಿ ಮಾತನಾಡುವುದು, ಕೂಗಾಟ ನಡೆಸುವ ಮೂಲಕ ಹುಚ್ಚಾಟ ನಡೆಸು ತ್ತಿದ್ದರು. ಅವರ ವರ್ತನೆಯಿಂದ ಸಹನೆ ಕಳೆದುಕೊಂಡ ಬೋಗಿ ಯಲ್ಲಿದ್ದ ಪ್ರಯಾಣಿಕರು ಮೊದಲು ಬುದ್ಧಿವಾದ ಹೇಳಿದರೂ ಕೇಳದೆ ಇದ್ದಾಗ, ಆ ಯುವಕ ರನ್ನು ಹಿಡಿದು ರೈಲಿನೊಳಗೆ ಧರ್ಮದೇಟು ನೀಡಿ ದ್ದಾರೆ. ಬಳಿಕ ರೈಲ್ವೆ ಪೊಲೀಸರಿಗೆ ಕರೆ ಮಾಡಿ ದ್ದಾರೆ. ರೈಲು ಹಾಸನ ನಿಲ್ದಾಣ ತಲುಪುತ್ತಿದ್ದಂತೆ ಗಾಬರಿಗೊಂಡ ಯುವಕರು, ಪೊಲೀಸರು ಬರುವ ಷ್ಟರಲ್ಲಿ ಪರಾರಿಯಾಗಿದ್ದಾರೆ.

ರೈಲಿನಲ್ಲಿ ಪ್ರತಿದಿನ ಸಾವಿರಾರು ಉದ್ಯೋಗಿಗಳು, ಶಾಲಾ-ಕಾಲೇಜು ವಿದ್ಯಾರ್ಥಿನಿಯರು, ಮಕ್ಕಳು ಮತ್ತು ಹಿರಿಯ ನಾಗರಿಕರು ಸಂಚರಿಸುವ ಈ ರೈಲಿನಲ್ಲಿ ಇಂತಹ ಪುಂಡರ ಹಾವಳಿ ನಿರಂತರವಾಗಿ ನಡೆಯುತ್ತಿದೆಂಬ ದೂರು ಕೇಳಿಬರುತ್ತಿದೆ. ಕುಡಿದು ಬೋಗಿಗಳಲ್ಲಿ ರಂಪಾಟ ಮಾಡುವ ವರಿಂದಾಗಿ ಮಹಿಳೆಯರು ಮತ್ತು ಮ ಕ್ಕಳು ಭಯ ಭೀತಿಯಿಂದ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ರೈಲಿನಲ್ಲಿ ಪೊಲೀಸರ ಗಸ್ತು ಹೆಚ್ಚಿಸಬೇಕು ಮತ್ತು ಅಸಭ್ಯ ವರ್ತನೆಗೆ ಸಂಬಂಧಪಟ್ಟ ಅಧಿಕಾರಿ ಗಳು ಕೂಡಲೇ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK